## 'ಜನರ ಮುಂದೆ ಉತ್ತರಿಸಬೇಕಾದ ಸಂದರ್ಭ ಬಂದಾಗಲೆಲ್ಲಾ ಪ್ರಧಾನಿ ಮೋದಿ ಫಾರಿನ್ ಟೂರ್ ಹೋಗ್ಬಿಡ್ತಾರೆ'

• ಉದಯವಾಹಿನಿ, ಬೆಂಗಳೂರು

ಆರ್‌ಎಸ್‌ಎಸ್, ವಿಹೆಚ್ ಪಿ ಮತ್ತು ಟ್ರಸ್ಟ್‌ನವರು ಮಾಡಿರುವ ಆರೋಪಿತ ದೇಣಿಗೆ ದುರ್ಬಳಕೆಗೆ ಕಾಂಗ್ರೆಸ್ ಪಕ್ಷ ಏಕೆ ಉತ್ತರ ನೀಡಬೇಕು ಇದಕ್ಕೆ ಹೊಣೆ ಯಾರು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕೇಳಿದ್ದಾರೆ.

ರಾಮಮಂದಿರ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನ ತೀರ್ಪಿನ ಶ್ರೇಯಸ್ಸು ಬಿಜೆಪಿಯವರೇ ಪಡೆದಿದ್ದಾರೆ. ಶಿಲಾನ್ಯಾಸದ ಶ್ರೇಯಸ್ಸು ಅವರೇ ಪಡೆದಿದ್ದಾರೆ.

ಧ್ವಜಾರೋಹಣದ ಶ್ರೇಯಸ್ಸು ಪಡೆದಿದ್ದಾರೆ. ಪ್ರಾಣ ಪ್ರತಿಷ್ಠೆಯ ಶ್ರೇಯಸ್ಸು ಕೂಡ ಅವರಿಗೇ ಹೋಗಿದೆ. ಉದ್ಘಾಟನೆಯ ಶ್ರೇಯಸ್ಸನ್ನೂ ಬಿಜೆಪಿಯವರೇ ಪಡೆದಿದ್ದಾರೆ.

ಹೀಗಿರುವಾಗ ಆರೋಪಿತ ದೇಣಿಗೆ ದುರ್ಬಳಕೆಯ ಹೊಣೆಯನ್ನೂ ಅವರೇ ಹೊರಬೇಕಲ್ಲವೇ ಎಂದು ಕೇಳಿದ್ದಾರೆ. ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಬಿಜೆಪಿಯವರಿಗೆ 'ನೇಷನ್ ಫಸ್ಟ್' ಅಲ್ಲ, 'ಡೊನೇಷನ್ ಫಸ್ಟ್'. ಈ ಹಣ ಎಲ್ಲಿಗೆ ಹೋಗಿದೆ ಟ್ರಸ್ಟ್‌ನವರು ಏಕೆ ರಾಜೀನಾಮೆ ನೀಡಿದ್ದಾರೆ ಅವರು ರಾಜೀನಾಮೆ ನೀಡಿದ್ದಾರೆ ಅಂದ ಮೇಲೆ ಈ ಪ್ರಶ್ನೆಗಳಿಗೆ ಅವರು ಉತ್ತರ ನೀಡಲೇಬೇಕಲ್ಲವೇ ಎಂದು ಕೇಳಿದರು.


ಉದಯವಾಹಿನಿ ಚಿತ್ರ

ಪ್ರಧಾನಮಂತ್ರಿಯವರು ಮತ್ತೊಮ್ಮೆ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ. ಸಾರ್ವಜನಿಕರ ಮುಂದೆ ಉತ್ತರಿಸಬೇಕಾದ ಪ್ರಶ್ನೆಗಳು ಎದುರಾದಾಗಲೆಲ್ಲ ಅವರು ವಿದೇಶಕ್ಕೆ ಹೋಗುತ್ತಾರೆ ಎಂದು ಟೀಕಿಸಿದರು.

ಪ್ರಧಾನಮಂತ್ರಿಯವರು ಮತ್ತೊಮ್ಮೆ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ. ಸಾರ್ವಜನಿಕರ ಮುಂದೆ ಉತ್ತರಿಸಬೇಕಾದ ಪ್ರಶ್ನೆಗಳು ಎದುರಾದಾಗಲೆಲ್ಲ ಅವರು ವಿದೇಶಕ್ಕೆ ಹೋಗುತ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

## ಸಾರಿಗೆ ನೌಕರರ ಬೇಡಿಕೆ ಈಡೇರಿಕೆ ಕುರಿತು ಜುಲೈ 15ಕ್ಕೆ ಸಭೆ

• ಉದಯವಾಹಿನಿ, ಬೆಂಗಳೂರು

ಸಾರಿಗೆ ನೌಕರರ ಮುಷ್ಕರ ಪರಿಹರಿಸುವ ಸಂಬಂಧ ಇದೇ 15 ರಂದು ಕಾರ್ಮಿಕ ಆಯುಕ್ತರು ಮತ್ತು ನೌಕರರೊಂದಿಗೆ ಸಂಧಾನ ಮಾತುಕತೆ ನಿಗದಿಯಾಗಿದೆ ಎಂದು ಸಾರಿಗೆ ನಿಗಮಗಳ ಪರ ವಕೀಲರು ಹೈಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ

ನೌಕರರ ಮುಷ್ಕರ ಪ್ರಶ್ನಿಸಿ ನಗರದ ಮನೆ ಕೆಲಸಗಾರ್ತಿ ಸಿ.ವೇದಾವತಿ ಮತ್ತು ಕಟ್ಟಡ ಕಾರ್ಮಿಕ ಎಚ್.ವಿ.ಶ್ರೀಧರ್ ಮತ್ತಿತರರು ಸಲ್ಲಿಸಿರುವ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಭು ಬಖ್ರು ಅವರಿದ್ದ ವಿಭಾಗೀಯ ಪೀಠಕ್ಕೆ ಸಾರಿಗೆ ನಿಗಮಗಳ ಪರ ವಕೀಲರು ಈ ಮಾಹಿತಿ ನೀಡಿದ್ದಾರೆ.

ಇದಕ್ಕೆ ಸಾರಿಗೆ ನೌಕರರ ಪರ ಕಾರ್ಮಿಕ ಸಂಘಟನೆಗಳ ವಕೀಲರು, ನ್ಯಾಯಾಲಯ ನಿರ್ದೇಶನ ನೀಡಿದ್ದರೂ ಸಹ ಸರ್ಕಾರ ಸಾರಿಗೆ ಇಲಾಖೆ ನೌಕರರ ಬೇಡಿಕೆಗೆ ಸ್ಪಂದಿಸಿಲ್ಲ. ಹಾಗಾಗಿ ಹೈಕೋರ್ಟ್ ಸಾರಿಗೆ ನೌಕರರ ಹಿತಾಸಕ್ತಿಯನ್ನೂ ಪರಿಗಣಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ, ನಿಗಮಗಳ ಪರ ವಕೀಲರು ಉತ್ತರಿಸಿ, ಈಗಾಗಲೇ ಜು.15ರಂದು ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ. ಅದರಲ್ಲಿ ನೌಕರರ ಬೇಡಿಕೆಗಳ ಪರಿಹಾರದ ಬಗ್ಗೆ ಸಮಗ್ರವಾಗಿ ಮತ್ತು ಸೌದಾರ್ಹಯುತವಾಗಿ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

## ಶ್ರೀ ವಿಜಯೀಂದ್ರತೀರ್ಥರ ಗ್ರಂಥಗಳು ಧಾರ್ಮಿಕ ಪ್ರವಚನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಜುಲೈ 10 ರಿಂದ 12ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ಗಿರೀಶ್ ಆಚಾರ್ಯರಿಂದ ಶ್ರೀ ವಿಜಯೀಂದ್ರತೀರ್ಥರ ಗ್ರಂಥಗಳು ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಬೆಂಗಳೂರು-560003

## ಗಿಮಿಕ್' ಎಂದ ವಿಜಯೇಂದ್ರಗೆ ಬಿಡಿಎ ಜಿಬಿಎ ತಿರುಗೇಟು..!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ 15 ಲಕ್ಷ ಸಸಿಗಳನ್ನು ನೆಟ್ಟು ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದ ಬೃಹತ್ ವೃಕ್ಷಾರೋಪಣ ಅಭಿಯಾನ ಇದೀಗ ರಾಜಕೀಯ ವಾಗ್ವಾದಕ್ಕೆ ಕಾರಣವಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಈ ಅಭಿಯಾನವನ್ನು ಕೇವಲ ಪ್ರಚಾರದ ಗಿಮಿಕ್ ಎಂದು ಟೀಕಿಸಿದ್ದು, ಇದಕ್ಕೆ ಬೃಹತ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಬೆಂಗಳೂರು ನಗರ ಆಡಳಿತದ ಅಧಿಕಾರಿಗಳು ತಿರುಗೇಟು ನೀಡಿದ್ದಾರೆ.

ಬಿಡಿಎ ವತಿಯಿಂದ ಸಾರ್ವಜನಿಕರ ಸಹಭಾಗಿತ್ವದಲ್ಲಿ ಮಿಯಾವಾಕಿ ವಿಧಾನ ಬಳಸಿ 15 ಲಕ್ಷ ಸಸಿಗಳನ್ನು ನೆಡುವ ಅಭಿಯಾನ ನಡೆಸಲಾಗಿತ್ತು. ಈ ಅಭಿಯಾನಕ್ಕೆ ಗಿನ್ನೆಸ್ ವಿಶ್ವ ದಾಖಲೆ ಲಭಿಸಿದ್ದು, ನಗರದಲ್ಲಿ ಹಸಿರು ವಾತಾವರಣ ಹೆಚ್ಚಿಸುವ ಮಹತ್ವದ ಪ್ರಯತ್ನ ಎಂದು ಸರ್ಕಾರ ಬಣ್ಣಿಸಿತ್ತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ನೆಟ್ಟಿರುವ ಸಸಿಗಳಲ್ಲಿ ಬಹುತೇಕ ಒಣಗಿ ಹೋಗಿದ್ದು, ಸರ್ಕಾರ ಕೇವಲ ದಾಖಲೆಗಾಗಿ ಈ ಕಾರ್ಯಕ್ರಮ ನಡೆಸಿದೆ ಎಂದು ಆರೋಪಿಸಿದ್ದಾರೆ. ಈ ಆರೋಪಕ್ಕೆ ತಿರುಗೇಟು ನೀಡಿರುವ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, 15 ಲಕ್ಷ ಮರಗಳನ್ನು ನೆಟ್ಟಿದ್ದೇವೆ. ಅವು ಸಂಪೂರ್ಣವಾಗಿ ಬೆಳೆದ ಬಳಿಕ ಬೆಂಗಳೂರಿಗೆ ವರ್ಷಕ್ಕೆ ಸುಮಾರು 15 ಕೋಟಿ ಕೆಜಿ ಆಮ್ಲಜನಕ ಒದಗಿಸುವ ಸಾಮರ್ಥ್ಯ ಹೊಂದಿರಲಿವೆ.

> **ಮರಗಳ ನಿರ್ವಹಣೆಗೆ ಅಗತ್ಯ ನೀರಾವರಿ ವ್ಯವಸ್ಥೆ ಮಾಡಲಾಗುತ್ತಿದ್ದು, ಮಿಯಾವಾಕಿ ವಿಧಾನದಲ್ಲಿ ನೆಟ್ಟಿರುವುದರಿಂದ ಮರಗಳು ಹೆಚ್ಚು ವೇಗವಾಗಿ ಮತ್ತು ದಟ್ಟವಾಗಿ ಬೆಳೆಯಲಿವೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಬಿ.ವೈ. ವಿಜಯೇಂದ್ರ ಅವರು ಮೊದಲು ಸಸಿ ನೆಟ್ಟ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಿ ಬಳಿಕ ಟೀಕೆ ಮಾಡಲಿ.**

## ಇಂಜಿನಿಯರಿಂಗ್ ಸೀಟುಗಳ ಪೈಕಿ ಶೇ.25 ಖಾಸಗಿ, ಡೀಮ್ಡ್ ವಿವಿ ಪಾಲು

### ಎಸ್. ಸದಗೋಪನ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಸರ್ಕಾರ ಈ ಮನವಿಯನ್ನು ತಿರಸ್ಕರಿಸಿದೆ

• ಉದಯವಾಹಿನಿ, ಬೆಂಗಳೂರು

**1** 3,840 ಪ್ರವೇಶ ಸಾಮರ್ಥ್ಯ ಇದ್ದು
**2** ಒಟ್ಟು 37,690 ಸೀಟುಗಳು ಇದ್ದು
**3** ಕನಿಷ್ಠ 25 ಶೇಕಡಾ ಸೀಟುಗಳು

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಲಭ್ಯವಿರುವ ಸುಮಾರು 1.6 ಲಕ್ಷ ಇಂಜಿನಿಯರಿಂಗ್ ಸೀಟುಗಳಲ್ಲಿ ಕನಿಷ್ಠ 25 ಶೇಕಡಾ ಸೀಟುಗಳು ಖಾಸಗಿ ಹಾಗೂ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯಗಳ ಪಾಲಾಗಿವೆ. ಉನ್ನತ ಶಿಕ್ಷಣ ಇಲಾಖೆಯ ಮಾಹಿತಿಯ ಪ್ರಕಾರ, ಕೆಲವು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ವಿಭಾಗಗಳಲ್ಲಿ 4,000ಕ್ಕೂ ಹೆಚ್ಚು ಸೀಟುಗಳಿವೆ. 2026-27ನೇ ಶೈಕ್ಷಣಿಕ ವರ್ಷಕ್ಕೂ ಬಹುತೇಕ ಖಾಸಗಿ ವಿಶ್ವವಿದ್ಯಾಲಯಗಳು ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ವಿಭಾಗಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲು ಮನವಿ ಮಾಡಿದ್ದವು.

ಆದರೆ, ಎಸ್. ಸದಗೋಪನ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಸರ್ಕಾರ ಈ ಮನವಿಯನ್ನು ತಿರಸ್ಕರಿಸಿದೆ. ಸಮಿತಿಯು ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ವಿಭಾಗಗಳ ಸೀಟುಗಳನ್ನು ಹಂತಹಂತವಾಗಿ 17 ಶೇಕಡಾ ಕಡಿತಗೊಳಿಸಲು ಶಿಫಾರಸು ಮಾಡಿದ್ದು, ಐದು ಪ್ರಮುಖ ಮತ್ತು ಸಂಬಂಧಿತ ಕೋರ್ಸ್‌ಗಳ ಒಟ್ಟು ಪ್ರವೇಶ ಸಾಮರ್ಥ್ಯವನ್ನು 900 ಸೀಟುಗಳಿಗೆ ಮಿತಿಗೊಳಿಸುವಂತೆ ಸೂಚಿಸಿತ್ತು.

ಸರ್ಕಾರ ಅನುಮೋದಿಸಿರುವ ಸೀಟು ಹಂಚಿಕೆ ಪಟ್ಟಿಯ ಪ್ರಕಾರ, 30 ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಒಟ್ಟು 37,690 ಸೀಟುಗಳು ಇದ್ದು, ಎರಡು ಡೀಮ್ಡ್-ಟು-ಬಿ ವಿಶ್ವವಿದ್ಯಾಲಯಗಳಲ್ಲಿ 2,400 ಸೀಟುಗಳು ಲಭ್ಯವಿವೆ.

ಇವುಗಳಲ್ಲಿ ಬಹುಪಾಲು ಸೀಟುಗಳು ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ


ಉದಯವಾಹಿನಿ ಚಿತ್ರ

ವಿಭಾಗಗಳಲ್ಲೇ ಇವೆ. ಉದಾಹರಣೆಗೆ, ಬಿಎಂಎಸ್ ವಿಶ್ವವಿದ್ಯಾಲಯದ 180 ಸೀಟುಗಳೆಲ್ಲವೂ ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ವಿಭಾಗಗಳಲ್ಲಿವೆ. ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಒಟ್ಟು 960 ಸೀಟುಗಳ ಪೈಕಿ 900 ಸೀಟುಗಳು ಅಖ ಮತ್ತು ಸಂಬಂಧಿತ ವಿಭಾಗಗಳಿಗೆ ಮೀಸಲಾಗಿವೆ. ಅದೇ ರೀತಿ, ದಯಾನಂದ ಸಾಗರ ವಿಶ್ವವಿದ್ಯಾಲಯದಲ್ಲಿ ಒಟ್ಟು 3,840 ಪ್ರವೇಶ ಸಾಮರ್ಥ್ಯ ಇದ್ದು, ಕಂಪ್ಯೂಟರ್ ಸೈನ್ಸ್ ಹೊರತಾದ ವಿಭಾಗಗಳಿಗೆ ಕೇವಲ 180 ಸೀಟುಗಳು ಮಾತ್ರ ಲಭ್ಯವಿವೆ.2025-26ನೇ ಶೈಕ್ಷಣಿಕ ವರ್ಷದ ಮೂರನೇ ಸುತ್ತಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ವಿಭಾಗಗಳಲ್ಲಿ 50,064 ಸೀಟುಗಳು ಲಭ್ಯವಿದ್ದರೆ, 2024-25ನೇ ಶೈಕ್ಷಣಿಕ ವರ್ಷದಲ್ಲಿ ಈ ಸಂಖ್ಯೆ 45,637 ಆಗಿತ್ತು.

### 50 ಶೇಕಡಾ ಸೀಟುಗಳು

**ಸರ್ಕಾರದ ಅನುದಾನಿತ ಕೋಟಾದಡಿ ಲಭ್ಯವಿರುವ 81,000 ಸೀಟುಗಳಲ್ಲಿ ಸುಮಾರು 50 ಶೇಕಡಾ ಸೀಟುಗಳು ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ವಿಭಾಗಗಳಿಗೆ ಸೇರಿವೆ.**

**ಈ ವರ್ಷ ಸರ್ಕಾರದ ಕೋಟಾದಡಿ ಸುಮಾರು 40,000 ಮತ್ತು ಸಂಬಂಧಿತ ವಿಭಾಗಗಳ ಸೀಟುಗಳು ಲಭ್ಯವಿದ್ದು, ಮೂರನೇ ಸುತ್ತಿನ ಕೌನ್ಸೆಲಿಂಗ್ ವೇಳೆಗೆ ಈ ಸಂಖ್ಯೆ ಇನ್ನಷ್ಟು ಹೆಚ್ಚುವ ನಿರೀಕ್ಷೆಯಿದೆ.**



> **ಇದು ಪ್ರಾಥಮಿಕ ಸೀಟು ಹಂಚಿಕೆ ಪಟ್ಟಿ ಮಾತ್ರ. ಕಾಮೆಡ್ ಕೆ ಕೌನ್ಸೆಲಿಂಗ್ ಬಳಿಕ ಕಾಲೇಜುಗಳು ಸರ್ಕಾರಕ್ಕೆ ಹಿಂದಿರುಗಿಸುವ ಸೀಟುಗಳನ್ನು ಸೇರಿಸಿದ ನಂತರ ಸೀಟುಗಳ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

## ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ

### ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

• ಉದಯವಾಹಿನಿ, ಕೆ.ಆರ್.ಪುರ,

ಮಹದೇವಪುರ ಕ್ಷೇತ್ರವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶವಾಗಿದ್ದು, ಭವಿಷ್ಯದ ವಾಹನ ಸಂಚಾರ ಹಾಗೂ ಜನಸಂಖ್ಯೆಯ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಯೋಜಿತ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರು ತಿಳಿಸಿದರು.

ಮಹದೇವಪುರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಗುಂಜೂರು ಮುಖ್ಯರಸ್ತೆ (ರಾಜ್ಯ ಹೆದ್ದಾರಿ-35) ಯಿಂದ ಪೆರಿಫೆರಲ್ ರಿಂಗ್ ರಸ್ತೆ ಸಂಪರ್ಕಿಸುವ 45 ಮೀಟರ್ ಅಗಲದ ಸಿಡಿಪಿ ರಸ್ತೆ ನಿರ್ಮಾಣ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕ್ಷೇತ್ರದ ಜನರಿಗೆ ಉತ್ತಮ ರಸ್ತೆ ಸಂಪರ್ಕ ಹಾಗೂ ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಕ್ಷೇತ್ರದಾದ್ಯಂತ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಗುಂಜೂರು ಮುಖ್ಯರಸ್ತೆಯಿಂದ ಪಿಆರ್‌ಆರ್‌ಗೆ ಸಂಪರ್ಕ ಕಲ್ಪಿಸುವ 45 ಮೀಟರ್ ಸಿಡಿಪಿ ರಸ್ತೆ ನಿರ್ಮಾಣವು ಈ ಭಾಗದ ಜನರ ಬಹುದಿನಗಳ ಬೇಡಿಕೆಯಾಗಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಸಂಚಾರ ದಟ್ಟಣೆ ಕಡಿಮೆಯಾಗಿ ಸಾವಿರಾರು ಜನರಿಗೆ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ ಎಂದು ಹೇಳಿದರು.

ಈಗ ಕೈಗೊಂಡಿರುವ ರಸ್ತೆ ಕಾಮಗಾರಿಗಳಿಂದ ಗುಂಜೂರು, ವರ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಂಪರ್ಕ ವ್ಯವಸ್ಥೆ ಮತ್ತಷ್ಟು ಸುಧಾರಣೆಗೊಳ್ಳಲಿದ್ದು, ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.


ಉದಯವಾಹಿನಿ ಚಿತ್ರ

## ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಶರವಣ ಭೇಟಿ

• ಉದಯವಾಹಿನಿ, ದೊಡ್ಡಬಳ್ಳಾಪುರ


ಉದಯವಾಹಿನಿ ಚಿತ್ರ

ದೊಡ್ಡಬಳ್ಳಾಪುರ, - ತಾಲ್ಲೂಕಿನ ಪ್ರಸಿದ್ಧ ಘಾಟ್ ಕ್ಷೇತ್ರದ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮತ್ತು ಅವಧೂತ ಶ್ರೀ ವಿನಯ್ ಗುರೂಜಿ ಭೇಟಿ ನೀಡಿ ದೇವರ ದರ್ಶನ ಪಡೆದರು.

ರೈತರು ಪ್ರಾರ್ಥಿಸುತ್ತಿರುವ ಮಳೆ ಆಗಮನಕ್ಕೆ ದೇವರ ಕೃಪೆ ಇರಲಿ, ಬರಪೀಡಿತ ಪ್ರದೇಶಗಳಲ್ಲಿ ಮಳೆಯಾಗಲಿ, ಸುಬ್ರಹ್ಮಣ್ಯ ಅಂದರೆ ಶಕ್ತಿ, ಸ್ಕಂದನನ್ನ ಪ್ರಾರ್ಥನೆ ಮಾಡಬೇಕು ಅಂತ ಮನಸ್ಸಿಗೆ ಬಂದಿದ್ದು, ಶರವಣ ಅವರೊಂದಿಗೆ ಪೂಜೆ ಸಲ್ಲಿಸಿದ್ದೇವೆ ಎಂದು ಗುರೂಜಿ ತಿಳಿಸಿದರು. ಸರ್ಕಾರ ಬಿಡದಿ ರೈತರನ್ನ ಸೇರಿಸಿಕೊಂಡು ಮಾತಾಡಬೇಕು, ಎಲ್ಲರ ಸಹಮತ ತೆಗೆದುಕೊಂಡು ಮುಂದುವರೆಯಬೇಕು, ಬಂದು ಕ್ಷೇತ್ರದಲ್ಲಿ ಪ್ರಾರ್ಥನೆ ಮಾಡಿ ಶಾಂತಿಯುತ ವಾತಾವರಣದಿಂದ ಸಮಸ್ಯೆ ಬಗೆಹರಿಯುತ್ತೆ ಎಂದರು.

ಈ ವೇಳೆ ಶಾಸಕ ಧೀರಜ್, ಮುನಿರಾಜು, ಉಪವಿಭಾಗಾಧಿಕಾರಿ ಮಂಜುನಾಥ್ ಮೊದಲಾದವರು ಹಾಜರಿದ್ದರು.ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಶಾಸಕರಾಗಿ, ಜವಾಬ್ದಾರಿಯುತ ಸ್ಥಾನದಲ್ಲಿರುವವರು ಕಾಮಿಡಿ ಪೀಸ್ ಆಗ ಬಾರದು, ಮಾಸ್ಟರ್‌ಪೀಸ್ ಆಗಬೇಕು.

## ವಿಧಾನಸಭಾ ಕಾರ್ಯಾಲಯದಿಂದ ಕಠಿಣ ರೂಲ್ಸ್ ಬಾಡಿಗೆ ನೇರವಾಗಿ ಶಾಸಕರ ವೇತನದಿಂದಲೇ ವಸೂಲಿ..!

• ಉದಯವಾಹಿನಿ, ಬೆಂಗಳೂರು

ಶಾಸಕರ ಭವನ (ಎಲ್‌ಎಚ್)ದಲ್ಲಿನ ಸರ್ಕಾರಿ ವಾಹನಗಳ ದುರ್ಬಳಕೆಗೆ ಕಡಿವಾಣ ಹಾಕಲು ವಿಧಾನಸಭೆ ಕಾರ್ಯಾಲಯ ಕಠಿಣ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ.

ಇನ್ನು ಮುಂದೆ ಶಾಸಕರ ಹೆಸರಿನಲ್ಲಿ ಬಳಸಲಾಗುವ ವಾಹನಗಳ ಬಾಡಿಗೆಯನ್ನು ನೇರವಾಗಿ ಸಂಬಂಧಿತ ಶಾಸಕರ ವೇತನದಿಂದಲೇ ವಸೂಲಿ ಮಾಡಲಾಗುತ್ತದೆ. ಜೊತೆಗೆ, ವೈಯಕ್ತಿಕ ಸಹಾಯಕರು, ಅತಿಥಿಗಳು ಹಾಗೂ ಪರಿಚಯಸ್ಥರ ಬಳಕೆಗಾಗಿ ವಾಹನಗಳನ್ನು ಶಿಫಾರಸು ಮಾಡುವ ಪದ್ಧತಿಗೂ ಬ್ರೇಕ್ ಹಾಕಲಾಗಿದ್ದು, ವಾಹನ ಬಳಕೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು, ಹಾಲಿ ಹಾಗೂ ಮಾಜಿ ಶಾಸಕರಿಗಾಗಿ ಶಾಸಕರ ಭವನದಲ್ಲಿರುವ ವಾಹನಗಳ ಬಳಕೆಗೆ ಸಂಬಂಧಿಸಿದಂತೆ ಈ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ.

ಮಾರ್ಗಸೂಚಿಯಂತೆ ಇನ್ನು ಮುಂದೆ ಶಾಸಕರು ತಮ್ಮ ವೈಯಕ್ತಿಕ ಸಹಾಯಕರು (ಪಿಎ), ಅತಿಥಿಗಳು ಅಥವಾ ಪರಿಚಯಸ್ಥರ ಬಳಕೆಗಾಗಿ ಶಾಸಕರ ಭವನದ ವಾಹನಗಳನ್ನು ಶಿಫಾರಸು ಮಾಡಲು ಅವಕಾಶ ಇರುವುದಿಲ್ಲ.ಶಾಸಕರ ಭವನದ ವಾಹನಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯೊಳಗೆ ಮಾತ್ರ ಬಳಸಬೇಕು. ತುರ್ತು ಪರಿಸ್ಥಿತಿ ಹೊರತುಪಡಿಸಿ ಬೆಂಗಳೂರಿನ ಹೊರಗೆ ವಾಹನಗಳನ್ನು ಕೊಂಡೊಯ್ಯಲು ಅವಕಾಶ ಇರುವುದಿಲ್ಲ. ಅನಿವಾರ್ಯ


ಉದಯವಾಹಿನಿ ಚಿತ್ರ

ಸಂದರ್ಭಗಳಲ್ಲಿ ವಾಹನವನ್ನು ಹೊರ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗಬೇಕಾದರೆ ವಿಧಾನಸಭಾಧ್ಯಕ್ಷರ ಪೂರ್ವಾನುಮತಿ ಕಡ್ಡಾಯವಾಗಿದೆ.

ಶಾಸಕರ ಹೆಸರಿನಲ್ಲಿ ಅವರ ವೈಯಕ್ತಿಕ ಸಹಾಯಕರು, ಪಕ್ಷದ ಕಾರ್ಯಕರ್ತರು ಹಾಗೂ ಪರಿಚಯಸ್ಥರು ಶಿಫಾರಸು ಪತ್ರಗಳ ಮೂಲಕ ವಾಹನಗಳನ್ನು ಪಡೆದು ಹೊರ ಜಿಲ್ಲೆಗಳಿಗೆ ಬಳಸುತ್ತಿರುವ ಆರೋಪಗಳು ಕೇಳಿಬಂದಿದ್ದವು.ಇದರಿಂದ ಶಾಸಕರಿಗೆ ಅಗತ್ಯವಿದ್ದ ಸಂದರ್ಭದಲ್ಲಿ ವಾಹನಗಳ ಕೊರತೆ ಉಂಟಾಗುತ್ತಿತ್ತು ಎಂದು ಕಾರ್ಯಾಲಯ ತಿಳಿಸಿದೆ.

> **ಮೂಲಗಳ ಪ್ರಕಾರ, ಶಾಸಕರ ಭವನದಲ್ಲಿ ಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರು ಸೇರಿದಂತೆ ಶಾಸಕರಿಗಾಗಿ ಸುಮಾರು 80 ವಾಹನಗಳು ಹಾಗೂ ವಿಧಾನ ಪರಿಷತ್ ಸದಸ್ಯರು ಮತ್ತು ಮಾಜಿ ಸದಸ್ಯರಿಗಾಗಿ ಸುಮಾರು 40 ವಾಹನಗಳು ಲಭ್ಯವಿವೆ. ಆದರೆ, ವಾಹನಗಳು ಹಾಗೂ ಚಾಲಕರ ಕೊರತೆಯಿರುವ ಹಿನ್ನೆಲೆಯಲ್ಲಿ ಶಾಸಕರ ಅಗತ್ಯಕ್ಕಾಗಿ ವಾಹನಗಳನ್ನು ಸದಾ ಸಿದ್ಧವಾಗಿಡಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

## ಗ್ಯಾರಂಟಿ ಯೋಜನೆಗಳೇ ಆರ್ಥಿಕ ಪ್ರಗತಿಯ ಬುನಾದಿ; ಹೆಮ್ಮೆಯ ಕ್ಷಣ ಎಂದ ಸಿಎಂ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಭಾರತವು ಒಟ್ಟಾರೆಯಾಗಿ ಕಡಿಮೆ ಮಧ್ಯಮ ಆದಾಯದ ಆರ್ಥಿಕತೆಯಾಗಿ ಉಳಿದಿದ್ದರೂ, ಐದು ಭಾರತೀಯ ರಾಜ್ಯಗಳು ಈಗ ವಿಶ್ವ ಬ್ಯಾಂಕಿನ ತಲಾ ಆದಾಯದ ಆಧಾರದ ಮೇಲೆ ಮೇಲ್ಮಧ್ಯಮ ಆದಾಯದ ವರ್ಗದ ಮಿತಿಯನ್ನು ದಾಟಿವೆ ಎಂದು ವಿಶ್ವಬ್ಯಾಂಕ್ ವರದಿ ತಿಳಿಸಿದೆ.

ವಿಶ್ವಬ್ಯಾಂಕ್‌ನ ಇತ್ತೀಚಿನ ವರದಿಯ ಪ್ರಕಾರ, ಭಾರತದ ಐದು ರಾಜ್ಯಗಳು 'ಮೇಲ್ಮಧ್ಯಮ ವರ್ಗದ ಆದಾಯ ಹೊಂದಿರುವ ಆರ್ಥಿಕತೆಗಳ ಮಿತಿಯನ್ನು (ಕಟ್ ಆಫ್) ಯಶಸ್ವಿಯಾಗಿ ದಾಟಿದ್ದು, ಈ ಪೈಕಿ ಕರ್ನಾಟಕವು ಮುಂಚೂಣಿಯಲ್ಲಿದೆ. ದೆಹಲಿ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕವು 5,579 ಡಾಲರ್ ತಲಾ ಆದಾಯದೊಂದಿಗೆ ದ್ವಿತೀಯ ಸ್ಥಾನ ಪಡೆದು ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದೆ.

ಈ ಮಹತ್ವದ ಸಾಧನೆಯ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಸಂತಸ ಹಂಚಿಕೊಂಡಿರುವ ಕರ್ನಾಟಕದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಇದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಡುವಂತಹ ಕ್ಷಣವಾಗಿದೆ ಎಂದು ಬಣ್ಣಿಸಿದ್ದಾರೆ.


ಉದಯವಾಹಿನಿ ಚಿತ್ರ

ರಾಜ್ಯದ ಈ ಹೆಮ್ಮೆಯ ಸಾಧನೆಯು ನಮ್ಮ ಉದ್ಯಮಿಗಳು, ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಯುವಜನತೆಯ ಕಠಿಣ ಪರಿಶ್ರಮ, ಅನ್ವೇಷಣಾ ಮನೋಭಾವ ಹಾಗೂ ಕ್ರಿಯಾಶೀಲತೆಗೆ ಸಂದ ಜಯವಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದೇ ವೇಳೆ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಂಡಿರುವ ಅವರು, ನಮ್ಮ ಐದು ಗ್ಯಾರಂಟಿ ಯೋಜನೆಗಳು ಕೇವಲ ಕಲ್ಯಾಣ ಕಾರ್ಯಕ್ರಮಗಳಲ್ಲ ಅವು ಜನರ ಮೇಲಿನ ಹೂಡಿಕೆಗಳಾಗಿವೆ.

### ಆರ್ಥಿಕ ಪ್ರಗತಿಗೆ ಅತ್ಯಂತ ಬಲವಾದ ಬುನಾದಿ

**ಕುಟುಂಬಗಳ ಆದಾಯವನ್ನು ಬಲಪಡಿಸುವ, ಜೀವನೋಪಾಯವನ್ನು ಭದ್ರಪಡಿಸುವ ಮೂಲಕ ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ವಿಸ್ತರಿಸುವ ಮೂಲಕ, ಒಳಗೊಳ್ಳುವಿಕೆಯ ಬೆಳವಣಿಗೆಯೇ ಸುಸ್ಥಿರ ಆರ್ಥಿಕ ಪ್ರಗತಿಗೆ ಅತ್ಯಂತ ಬಲವಾದ ಬುನಾದಿ ಎಂಬುದನ್ನು ನಾವು ಸಾಬೀತುಪಡಿಸಿದ್ದೇವೆ ಎಂದು ಬರೆದುಕೊಂಡಿದ್ದಾರೆ.**

## ಉಪಪಂಗಡಗಳಿಂದ ಒಡೆದಿರುವ ಲಿಂಗಾಯತ ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕು

• ಉದಯವಾಹಿನಿ, ಬೆಂಗಳೂರು

ವೀರಶೈವ-ಲಿಂಗಾಯತ ಧರ್ಮವು ಮೂಲತಃ ಜಾತಿರಹಿತ ಧರ್ಮವಾಗಿದ್ದರೂ, ಕಾಲಕ್ರಮೇಣ ಸಮಾಜವು ಉಪಪಂಗಡಗಳ ಆಧಾರದ ಮೇಲೆ ವಿಭಜನೆಯಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ವಿಭಜನೆ ಕುರಿತು ಲಿಂಗಾಯತ ಸಮುದಾಯ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಸಚಿವ ಎಂ.ಬಿ. ಪಾಟೀಲ್ ಅವರು ಹೇಳಿದ್ದಾರೆ.

ನಗರದಲ್ಲಿ ಆರಂಭವಾದ ಎರಡು ದಿನಗಳ 14ನೇ ಶರಣ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು,


ಉದಯವಾಹಿನಿ ಚಿತ್ರ

ವೀರಶೈವ-ಲಿಂಗಾಯತ ಧರ್ಮದ ತತ್ವಗಳು ಸಮಾಜದಲ್ಲಿ ವ್ಯಾಪಕವಾಗಿ ಹರಡದಿರುವುದಕ್ಕೆ ಆಂತರಿಕ ಭಿನ್ನಾಭಿಪ್ರಾಯಗಳೇ ಪ್ರಮುಖ ಕಾರಣವಾಗಿವೆ ಎಂದು ಅಭಿಪ್ರಾಯಪಟ್ಟರು. ಲಿಂಗಾಯತ ಧರ್ಮಕ್ಕೆ ಹೊರಗಿನಿಂದಷ್ಟೇ ಅಲ್ಲ, ಸಮುದಾಯದ ಒಳಗಿನಿಂದಲೂ ವಿರೋಧ ವ್ಯಕ್ತವಾಗಿದೆ.

ಬಸವಾದಿ ಶರಣರ ತತ್ವ ಹಾಗೂ ಲಿಂಗಾಯತ ಧರ್ಮ ಕರ್ನಾಟಕದ ಗಡಿಯನ್ನು ದಾಟಿ ದೇಶದಾದ್ಯಂತ ಮತ್ತು ಜಗತ್ತಿನಾದ್ಯಂತ ಹರಡುವಷ್ಟು ಹರಡಲಿಲ್ಲ ಎಂದು ಹೇಳಿದರು.

## ಫುಟ್ಬಾತ್ ಒತ್ತುವರಿ ತೆರವು ಕಾರ್ಯದಲ್ಲಿರುವ ಲೋಪದೋಷಗಳನ್ನ ಅಧಿಕಾರಿಗಳು ಸರಿಪಡಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಫುಟ್ಬಾತ್ ಒತ್ತುವರಿ ತೆರವು ಕಾರ್ಯದಲ್ಲಿರುವ ಲೋಪದೋಷಗಳನ್ನ ಅಧಿಕಾರಿಗಳು ಸರಿಪಡಿಸಬೇಕೆಂದು ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷ ವೈಟ್‌ಫೀಲ್ಡ್ ಮುರುಗೇಶ್ ಆರೋಪಿಸಿದ್ದಾರೆ.

ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ನಲ್ಲಿ ರಸ್ತೆ ಬದಿಗಳಲ್ಲಿ ಹಾಗೂ ರಸ್ತೆ ವಿಭಜಕದಲ್ಲಿ ಹಾಕಿರುವ ಅನಾಧಿಕೃತ ಹೋಲ್ಡಿಂಗ್ಸ್ ಗಳ ವಿರುದ್ಧ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಪಾದಚಾರಿ ಮಾರ್ಗಗಳಲ್ಲಿ ಹೋಲ್ಡಿಂಗ್ಸ್ ಹಾಗಿರುವ ಖಾಸಗಿ ಕಂಪನಿಗಳು ವಿರುದ್ಧ ಕ್ರಮಕೈಗೊಂಡು ಅಂತಹ ಹೋಲ್ಡಿಂಗ್ಸ್ ಳನ್ನು ತೆರವು ಮಾಡಿ.

ಇದರಿಂದ ಪಾದಚಾರಿಗಳಿಗೆ ತೀವ್ರ ತೊಂದರೆ ಉಂಟಾಗುತ್ತಿದೆ ಎಂದರು. ಸರ್ಕಾರ ಬಡವರಪರ ಬಿಟ್ಟು ಉಳ್ಳವರಲರ ಕೆಲಸ ಮಾಡಲು ಮುಂದಾಗಿರುವುದು ಸರಿಯಲ್ಲ, ಕಾನೂನು ಎಲ್ಲರಿಗೂ ಒಂದೆಯಾಗಿರಬೇಕು.

ಈ ಕೂಡಲೇ ಅನಾಧಿಕೃತ ಹೋಲ್ಡಿಂಗ್ಸ್ ಳ ತೆರುವು ಮಾಡಬೇಕಿ ಇಲ್ಲವಾದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು ಆಕ್ರೋಶ ವ್ಯಕ್ತಪಡಿಸಿದರು.

## ಅಧಿಕಾರ ಹೊಂದಿರುವವರೇ ಭೂಮಿ ನುಂಗಿದರೆ ಹೇಗೆ? ಶಾಸಕ ಸುಧಾಕರ್

### ರಾಜಕೀಯ ಅಧಿಕಾರಸ್ಥರು ಭೂ ಕಬಳಿಕೆ ಮಾಡುವುದು ಇನ್ನೂ ದೊಡ್ಡ ಅಪರಾಧ

### ಒತ್ತುವರಿ ಸರ್ಕಾರಿ ಜಮೀನನ್ನು ನಿವೇಶನಗಳಾಗಿ ವಿಂಗಡಿಸಿ ಮಾರಾಟ

• ಉದಯವಾಹಿನಿ, ಬೆಂಗಳೂರು

ಸಾಮಾನ್ಯ ನಾಗರಿಕ ಭೂ ಕಬಳಿಕೆ ಮಾಡುವುದಕ್ಕೂ ರಾಜಕೀಯ ಅಧಿಕಾರ ಹೊಂದಿದ ವ್ಯಕ್ತಿಗಳು ಮಾಡುವುದಕ್ಕೂ ಗಂಭೀರ ವ್ಯತ್ಯಾಸಗಳಿವೆ. ರಾಜಕೀಯ ಅಧಿಕಾರಸ್ಥರು ಭೂ ಕಬಳಿಕೆ ಮಾಡುವುದು ಆಡಳಿತದ ಮೇಲಿನ ಸಾರ್ವಜನಿಕ ನಂಬಿಕೆಯನ್ನೇ ಸರ್ವನಾಶ ಮಾಡುತ್ತದೆ ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಮಾಜಿ ಗೃಹ ಸಚಿವ ಚೌಡರೆಡ್ಡಿ ವಿರುದ್ಧದ ಭೂಕಬಳಿಕೆ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದ ಹೈಕೋರ್ಟ್, ಮಾಜಿ ಸಚಿವ ಚೌಡರೆಡ್ಡಿ ಅವರ ಇಬ್ಬರು ಪುತ್ರರಾದ ಎಂ.ಸಿ. ಸುಧಾಕರ್ ಮತ್ತು ಬಾಲಾಜಿ ಅವರನ್ನು ಆರೋಪಿಯನ್ನಾಗಿ ಮಾಡದಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

**1** ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ
**2** ಪ್ರಸ್ತುತ ಲೋಕಾಯುಕ್ತ ಪೊಲೀಸರು
**3** ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ

ಮಾಜಿ ಗೃಹ ಸಚಿವ ಚೌಡರೆಡ್ಡಿ ಅವರಿಗೆ ದೊಡ್ಡ ಹಿನ್ನಡೆಯಾಗಿದ್ದು, ಕರ್ನಾಟಕ ಹೈಕೋರ್ಟ್ ಆಗಿನ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದಲ್ಲಿ (ಪ್ರಸ್ತುತ ಲೋಕಾಯುಕ್ತ ಪೊಲೀಸರು) ದಾಖಲಾಗಿದ್ದ ಅಪರಾಧವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಚಿಂತಾಮಣಿ ತಾಲ್ಲೂಕು ಕನ್ನಂಪಲಿ ಗ್ರಾಮದ ಸರ್ವೇ ನಂಬರ್ 11ರಲ್ಲಿನ 1.19 ಗುಂಟೆ ಹುಲ್ಲುಬನ್ನಿ (ಹುಲ್ಲುಗಾವಲು, ಗೋಮಾಳ) ಖರಾಬು ಜಮೀನನ್ನು ಅಕ್ರಮವಾಗಿ ಚೌಡರೆಡ್ಡಿ ಮತ್ತು ಬಾಲಾಜಿ ರೆಡ್ಡಿ ಇವರಿಗೆ ನಿಯಮಬಾಹಿರವಾಗಿ ಖಾತೆ ಮಾಡಿಸಿಕೊಡಲಾಗಿದೆ. ಒತ್ತುವರಿ ಮಾಡಲಾದ ಈ ಸರ್ಕಾರಿ ಜಮೀನನ್ನು ನಿವೇಶನಗಳಾಗಿ ವಿಂಗಡಿಸಿ ಮಾರಾಟ ಮಾಡಲಾಗಿದೆ' ಎಂಬ ಆರೋಪ ಕೇಳಿ ಬಂದಿದೆ. ಈ ಕುರಿತಂತೆ ಸೊನ್ನಶೆಟ್ಟಿಹಳ್ಳಿಯ ಆರ್.ವೆಂಕಟರಮಣ ಅವರು ಚೌಡರೆಡ್ಡಿ, ನಾರಾಯಣಪ್ಪ ಸೇರಿದಂತೆ ಹಲವು ಅಧಿಕಾರಿಗಳ ವಿರುದ್ಧ 2016ರ ಏಪ್ರಿಲ್ 24ರಂದು ಅಂದಿನ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ಸಲ್ಲಿಸಿದ್ದರು. ಅರ್ಜಿದಾರರೂ ಸೇರಿದಂತೆ ಹಲವು ಸರ್ಕಾರಿ ಅಧಿಕಾರಿಗಳು ಈ ಒತ್ತುವರಿಗೆ ಅನುಕೂಲ ಮಾಡಿಕೊಟ್ಟು ತಮ್ಮ ಅಧಿಕಾರ ದುರುಪಯೋಗ ಮಾಡಿ ಕರ್ತವ್ಯಲೋಪ ಎಸಗಿದ್ದಾರೆ. ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದರು. 2016 ರಲ್ಲಿ ವೆಂಕಟರಮಣ ಅವರು ಎಸಿಬಿಗೆ ಸಲ್ಲಿಸಿದ ದೂರಿನಲ್ಲಿ, ಸರ್ವೆ ಸಂಖ್ಯೆ 12 ಮತ್ತು 13ರ ಭೂಮಿಯನ್ನು ಹೊಂದಿದ್ದ ಚೌಡರೆಡ್ಡಿ ಅವರು ಅವುಗಳನ್ನು ಕೃಷಿಯೇತರ ಉದ್ದೇಶಗಳಿಗಾಗಿ ಪರಿವರ್ತಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಪಕ್ಕದ ಸರ್ಕಾರಿ ಹುಲ್ಲು ಬನಿ ಖರಾಬ್ ಭೂಮಿಯನ್ನು 1 ಎಕರೆ 19 ಗುಂಟೆ ಅಳತೆಯ ಸರ್ವೆ ಸಂಖ್ಯೆ 11 ಅನ್ನು ಸಹ ಅವರು ಮತ್ತು ಅವರ ಕುಟುಂಬ ಸದಸ್ಯರು ನಿವೇಶನಗಳನ್ನು ಪರಿವರ್ತಿಸಿದ್ದಾರೆ.

ಸಾರ್ವಜನಿಕರು ಸರ್ಕಾರಿ ಮೀನು ಒತ್ತುವರಿ ಮಾಡುವುದು ಗಂಭೀರ ಅಪರಾಧ. ಅದರಲ್ಲೂ ರಾಜಕೀಯ ಅಧಿಕಾರಸ್ಥರು ಭೂ ಕಬಳಿಕೆ ಮಾಡುವುದು ಇನ್ನೂ ದೊಡ್ಡ ಅಪರಾಧ. ಈ ಕೃತ್ಯ ಆಡಳಿತದ ಮೇಲಿನ ಸಾರ್ವಜನಿಕ ನಂಬಿಕೆಯನ್ನೇ ಸರ್ವನಾಶ ಮಾಡುತ್ತದೆ ಎಂದು ಪೀಠ ಹೇಳಿದೆ.


ಉದಯವಾಹಿನಿ ಚಿತ್ರ

> **ಇದೇ ವೇಳೆ, ಚೌಡರೆಡ್ಡಿ ಇಬ್ಬರು ಪುತ್ರರಾದ ಎಂ.ಸಿ. ಬಾಲಾಜಿ ಮತ್ತು ಮಾಜಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ 2016 ರಲ್ಲಿ ಎಸಿಬಿ ದಾಖಲಿಸಿದ ಅಪರಾಧದಲ್ಲಿ ಸೇರಿಸದಿರುವ ಬಗ್ಗೆ ನ್ಯಾಯಾಲಯವು ಗಂಭೀರ ಕಳವಳ ವ್ಯಕ್ತಪಡಿಸಿತು. ನ್ಯಾಯಮೂರ್ತಿ ಎಂ ನಾಗಪ್ರಸನ್ನ**

### ನೌಕರರ ಮನೆ ನಿರ್ಮಾಣ

ಬಾಲಾಜಿ ಅವರು ಸರ್ಕಾರಿ ನೌಕರರ ಮನೆ ನಿರ್ಮಾಣ ಸಹಕಾರಿ ಸಂಘದ ಪರವಾಗಿ ನೋಂದಾಯಿಸದ ಸಾಮಾನ್ಯ ಪವರ್ ಆಫ್ ಅಟಾರ್ನಿಯನ್ನು ಕಾರ್ಯಗತಗೊಳಿಸಿದರು, ಇದು ಹಲವಾರು ವ್ಯಕ್ತಿಗಳ ಪರವಾಗಿ ಮಾರಾಟ ಪತ್ರಗಳನ್ನು ಕಾರ್ಯಗತಗೊಳಿಸಿತು.

ಸೈ.ನಂ. 1ರಲ್ಲಿ ರಚಿಸಲಾದ 37 ನಿವೇಶನಗಳಲ್ಲಿ, ಬಾಲಾಜಿ 7 ನಿವೇಶನಗಳನ್ನು ಮತ್ತು ಸುಧಾಕರ್ 7 ನಿವೇಶನಗಳನ್ನು ಪಡೆದರು ಎಂದು ಆರೋಪಿಸಲಾಗಿದೆ.

# ಕೋಟೆ ಶಾಲೆ ಮುಂಭಾಗದಲ್ಲಿ ಯುಜಿಡಿ ಪೈಪ್ ಅವಾಂತರ. ಶಾಲಾ ಮಕ್ಕಳಿಗೆ ಅನಾರೋಗ್ಯ ಸಂಭವ

• **ಉದಯವಾಹಿನಿ ಚಿತ್ರದುರ್ಗ:**

ನಗರದ ಕೇಂದ್ರ ಭಾಗದಲ್ಲಿರುವ ಕೋಟೆ ಶಾಲೆ ಮುಂಭಾಗದಲ್ಲಿ ಆರು ತಿಂಗಳಿಂದ ಒಡೆದು ಹೋಗಿರುವ ಯುಜಿಡಿ ಪೈಪ್ನಿಂದ ಹೊರ ಚೆಲ್ಲುತ್ತಿರುವ ದುರ್ವಾಸನೆಯುಕ್ತ ಕೊಳಚೆ ನೀರು, ಚರಂಡಿ ನೀರು, ಶಾಲಾ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಂಭವವಿದ್ದು, ನಗರಸಭೆಯವರು ಶೀಘ್ರವಾಗಿ ದುರ್ವಾಸನೆ ಬೀರುತ್ತಿರುವ ಕೊಳಚೆ ನೀರಿನ ಕೊಳವೆಗಳನ್ನು ಸರಿಪಡಿಸಿ ಶಾಲಾ ಮಕ್ಕಳ ಆರೋಗ್ಯದ ಬಗ್ಗೆ ಚಿಂತನೆ ಮಾಡಬೇಕು ಎಂದು ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ರಾಜ್ಯ ಉಪಾಧ್ಯಕ್ಷ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಡಾ ಎಚ್ ಕೆ ಎಸ್ ಸ್ವಾಮಿಯವರು **ಉದಯವಾಹಿನಿ** ಪತ್ರಿಕೆಗೆ ವಿನಂತಿಸಿಕೊಂಡಿದ್ದಾರೆ.

ಆರು ತಿಂಗಳಿಂದ ಕೋಟೆ ಶಾಲೆಯ ಮುಂಭಾಗದಲ್ಲಿರುವ ಯುಜಿಡಿ ಪೈಪ್ ಹೊಡೆದು ಹೋಗಿ ದುರ್ವಾಸನೆಯುಕ್ತ ನೀರು,


ಉದಯವಾಹಿನಿ ಚಿತ್ರ

ಹೊರ ಚೆಲ್ಲಿ, ಆಟದ ಮೈದಾನವನ್ನೆಲ್ಲ ಕೊಳಚೆಮಯ ಮಾಡಿರುವ ದೃಶ್ಯವನ್ನು ನಗರಸಭೆಯ ಅಧಿಕಾರಿಗಳು ಗಮನಹರಿಸಿಯೂ ಸಹ, ಇನ್ನೂ ರಿಪೇರಿ ಮಾಡದೆ ಹಾಗೆ ಬಿಟ್ಟು ಹೋಗಿರುವುದರಿಂದ, ಅಲ್ಲಿ ಆಟವಾಡಲು ಮಕ್ಕಳಿಗೆ ಸ್ಥಳಾವಕಾಶವಿಲ್ಲದೆ ದುರ್ವಾಸನೆಯಿಂದ ಕೂಡಿರುವ ಕೊಳಚೆ ನೀರಿನಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಂಭವವಿದ್ದು, ನಗರಸಭೆಯ ಅಧಿಕಾರಿಗಳು ಮತ್ತು ಪರಿಸರ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ, ಅದನ್ನ ರಿಪೇರಿ ಮಾಡಿ, ಮಕ್ಕಳ ಆರೋಗ್ಯದ ಬಗ್ಗೆ ಚಿಂತನೆ ಮಾಡಬೇಕೆಂದು ಆಗ್ರಹಿಸಿದ್ದಾರೆ.

ಕೊಳಚೆ ತುಂಬಿದ ನೀರಿಂದ ಹೊರಹೊಮ್ಮುವ ದುರ್ವಾಸನೆಯನ್ನು ಕುಡಿದುಕೊಂಡು ಮಕ್ಕಳು ಅಲ್ಲೇ ಆಟವಾಡುತ್ತಿದ್ದು, ಸಾರ್ವಜನಿಕರು ಸಹ ಅಲ್ಲೇ ಸುತ್ತಮುತ್ತ ಓಡಾಡಿಕೊಂಡು ಮರದ ಕೆಳಗೆ ವಿಶ್ರಾಂತಿ ಪಡೆಯುವಂತಹ ಸ್ಥಳದಲ್ಲಿ, ಆರು ತಿಂಗಳಿಂದ ರಿಪೇರಿಯಾಗದೆ ಹಾಗೆ ಉಳಿದಿರುವ ದುರಾವಸ್ಥೆಯನ್ನ, ಅಧಿಕಾರಿಗಳು ಗಮನ ಹರಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಕೋಟೆ ಶಾಲೆಯ ಮುಂಭಾಗದಲ್ಲಿ ಬಹಳಷ್ಟು ಮೊಬೈಲ್ ಕಂಪನಿಗಳ ಸಿಮ್ ಮಾರಾಟಗಾರರು ಗ್ರಾಹಕರಿಗೆ ಸಿಮ್ ಮಾರಾಟ ಮಾಡುತ್ತಿದ್ದು, ವಾಸನೆ ಕುಡಿದುಕೊಳ್ಳುತ್ತಾ ಜೀವನ ಮಾಡುತ್ತಿದ್ದಾರೆ. ರಸ್ತೆ ಬದಿಯ ವ್ಯಾಪಾರಿಗಳಿಗೂ ಸಹ ಆ ದುರ್ವಾಸನೆ ಬೀರುತ್ತಿದ್ದು, ತುಂಬಿ ಹರಿಯುತ್ತಿರುವ ಕೊಳಚೆ ನೀರು ತಾ.ರಾ.ಸು ರಂಗಮಂದಿರ ಪಕ್ಕದ ರಸ್ತೆಯ ಮುಖಾಂತರ ಮುಖ್ಯ ರಸ್ತೆಯಲ್ಲಿ ಹರಿದು ಹೋಗುತ್ತಿರುವುದು ನಗರಸಭೆ ಅಲ್ಲೇ ಇದ್ದರೂ ಸಹ, ಇನ್ನು ಗಮನ ಹರಿಸದೆ ತಿರಸ್ಕಾರ ಭಾವನೆ ಹೊಂದಿರುವುದು ನಿಜಕ್ಕೂ ಶೋಚನೀಯ ಎಂದರು. ತಾ.ರಾ.ಸು ರಂಗಮಂದಿರದ ಅಕ್ಕಪಕ್ಕ ಜ್ಯೂಸ್ ಅಂಗಡಿಗಳು, ಎಳನೀರಿನ ಅಂಗಡಿಗಳು, ಹಣ್ಣಿನ ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು, ಕೊಳಚೆ ನೀರಿನಿಂದ ಬರುವ ದುರ್ಗಂಧ ಮತ್ತು ನೊಣಗಳಿಂದ ಜನಸಾಮಾನ್ಯರ ಆರೋಗ್ಯ ಕೆಡುತ್ತಿದೆ ಎಂದರು.

ಈಗಲಾದರೂ ನಗರಸಭೆ ಅಧಿಕಾರಿಗಳು, ಪರಿಸರ ಅಧಿಕಾರಿಗಳು ಸ್ಥಳ ವೀಕ್ಷಣೆ ಮಾಡಿ, ತಕ್ಷಣ ಉಸಿರುಗಟ್ಟಿಸುತ್ತಿರುವ ಯುಜಿಡಿ ಪೈಪ್ನ ಕೊಳಚೆ ನೀರನ್ನು ಹೊರಹಾಕಿ, ಪೈಪ್ಗಳನ್ನ ಸರಿಪಡಿಸಿ, ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲಗಳನ್ನು ತಪ್ಪಿಸಬೇಕಾಗಿ ಪತ್ರಿಕಾ ಪ್ರಕಟಣೆ ಮುಖಾಂತರ ವಿನಂತಿಸಿಕೊಂಡಿದ್ದಾರೆ.

# ಹಡೀಲು ಗದ್ದೆಗೆ ಮತ್ತೆ 'ಜೀವಕಲೆ' ಕೃಷಿ ಸಖಿಯರ ಸಾಹಸ

## ಪುತ್ತೂರು-ಕಡಬ ತಾಲ್ಲೂಕಿನಲ್ಲಿ ಸುಮಾರು 125 ಹೆಕ್ಟೇರ್ ಭೂಮಿಯಲ್ಲಿ ಭತ್ತದ ನೇಜಿ ನಾಟಿ ಕಾರ್ಯ ನಡೆದಿದೆ

• **ಉದಯವಾಹಿನಿ ಪುತ್ತೂರು;**

ರೈತವರ್ಗದ ಬದುಕಿಗೆ ಆರ್ಥಿಕ ಶಕ್ತಿಯಾಗಿ ವಿಶೇಷವಾದ ಬೆಂಬಲ ನೀಡದ ಭತ್ತದ ಕೃಷಿಯಿಂದ ಜಿಲ್ಲೆಯ ಸಾಕಷ್ಟು ರೈತವರ್ಗ ಇದರಿಂದ ದೂರವಾಗಿ ಉಳಿದಿದ್ದಾರೆ. ಇದರಿಂದ ಬಹಳಷ್ಟು ಗದ್ದೆಗಳು ಇಂದಿಗೂ

- **ಕೃಷಿ ಸಖಿಯರಿಂದ ಚಾಲನೆ**
- **ಸುಮಾರು 4 ಬಾರಿ ಉಳುಮೆ**
- **ನಾಟಿ ಮಾಡುವ ಮೂಲಕ**

ಹಡೀಲು ಬಿದ್ದು ಗಿಡಗಂಟಿಗಳ ತಾಣವಾಗಿದೆ. ಇಂತಹ ಹಡೀಲು ಗದ್ದೆಗಳಿಗೆ ಮತ್ತೆ ಜೀವಕಲೆ ಕೊಡುವ ನಿಟ್ಟಿನಲ್ಲಿ ಕೃಷಿಸಖಿಯರು ಮುಂದಾಗಿದ್ದಾರೆ. ಕಡಬ ತಾಲ್ಲೂಕಿನ ಕೃಷಿ ಸಖಿಯರು ಬಳ್ಪದ ಹಡೀಲು ಗದ್ದೆಯೊಂದನ್ನು ಉತ್ತು ನೇಜಿ ನಾಟಿ ಮಾಡುವ ಮೂಲಕ ಕೃಷಿ ಬದುಕಿಗೆ ಅರ್ಥ ಕೊಡುವ ಕೆಲಸ ಮಾಡಿದ್ದಾರೆ. ಕಳೆದ ಕೆಲ ವರ್ಷಗಳಿಂದ ಬಳ್ಪ ಗ್ರಾಪಂ ವ್ಯಾಪ್ತಿಯ ಕಾಂಜಿ ನಾರಾಯಣ ಮಣಿಯಾಣಿ ಅವರ ಗದ್ದೆ ಹಡೀಲು ಬಿದ್ದಿತ್ತು.

ಸುಮಾರು 2.50 ಎಕರೆ ಪ್ರದೇಶದ ಈ ಹಡೀಲು ಗದ್ದೆಗೆ ನೇಜಿನಾಟಿ ಮಾಡುವ ಕೆಲಸಕ್ಕೆ ಡೇ ಎನ್‌ಆರ್‌ಎಲ್‌ಎಂ ಯೋಜನೆಯಲ್ಲಿನ ಕೃಷಿ ಸಖಿಯರಿಂದ ಚಾಲನೆ ಸಿಕ್ಕಿದೆ. ಕಳೆದ ವರ್ಷದಿಂದ ಈ ಕೃಷಿ ಸಖಿಯರು ಈ ಹಡೀಲು ಗದ್ದೆಗೆ ಮತ್ತೆ ಚೈತನ್ಯ ನೀಡುವ ಸಾಹಸ ಮಾಡಿದ್ದಾರೆ. ಈ ಬಾರಿ ಗದ್ದೆಯಲ್ಲಿದ್ದ ಗಿಡಗಂಟಿಗಳನ್ನು


ಉದಯವಾಹಿನಿ ಚಿತ್ರ

> ಎಡಮಂಗಲದ ಕೃಷಿಸಖಿ ಪ್ರೇಮಾ ಹಾಗೂ ನಾನು ಸೇರಿಕೊಂಡು ಖರ್ಚು ಮತ್ತು ಆದಾಯವನ್ನು ಸಮಪಾಲು ಮಾಡಿಕೊಂಡಿದ್ದೇವೆ. ಈ ಬಾರಿ ಮತ್ತೆ ಒಟ್ಟು ಸೇರಿಕೊಂಡು ಸಮಬಾಳಿನ ಕಲ್ಪನೆಯೊಂದಿಗೆ ನೇಜಿ ನಾಟಿ ಮಾಡಿದ್ದೇವೆ.
> -ಹೇಮಾ ಕೆ ಎಸ್. ಬಳ್ಪದ ಕೃಷಿಸಖಿ.

ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಿ ಸುಮಾರು 4 ಬಾರಿ ಉಳುಮೆ ಮಾಡಿದ ಬಳಿಕ ಕೃಷಿ ಇಲಾಖೆ, ತಾಲ್ಲೂಕು ಪಂಚಾಯತ್ ಸಹಕಾರದೊಂದಿಗೆ ಡೇಎನ್‌ಆರ್‌ಎಲ್‌ಎಂ ತಂಡ ನೇಜಿ ನಾಟಿ ಮಾಡಿದೆ. ಇದೀಗ ಮತ್ತೆ ಇಂತಹದ್ದೊಂದು ಚಿಂತನೆ ಆರಂಭಗೊಂಡಿದೆ. ಕೃಷಿ ಸಖಿಯರ ಮೂಲಕ ಈ ಚಿಂತನೆಗೆ ಮುನ್ನುಡಿ ದೊರೆತಿದೆ. ಈಗಾಗಲೇ ಪುತ್ತೂರು ಕೃಷಿ ಇಲಾಖೆ ವ್ಯಾಪ್ತಿಯ ಪುತ್ತೂರು-ಕಡಬ

> ಕಳೆದ ವರ್ಷವೂ ಈ ಹಡೀಲು ಗದ್ದೆಯಲ್ಲಿ ಕೃಷಿ ಸಖಿಯರು ನೇಜಿ ನಾಟಿ ಮಾಡಿದ್ದೆವು. 4 ತಿಂಗಳ ಕಾಲ ಈ ಗದ್ದೆಯನ್ನು ತಯಾರಿ ಮಾಡುವ ಶ್ರಮ, ಕೆಲಸಕ್ಕೆ ಬಂದವರಿಗೆ ಸಂಬಳ, ಸೂಕ್ತ ಗೊಬ್ಬರ, ಔಷಧಿ ಸಿಪಂಡಣೆ ಸೇರಿದಂತೆ ಇದಕ್ಕೆ ಪೂರಕವಾದ ವೆಚ್ಚ ಸುಮಾರು 80 ಸಾವಿರ. ಈ ನಾಟಿಯಿಂದ 22.50 ಕ್ವಿಂಟಾಲ್ ಭತ್ತದ ಇಳುವರಿ ನಡೆಯಿತು.
> -ಸುಬ್ರಹ್ಮಣ್ಯದ ಕೃಷಿಸಖಿ ರಮಣಿ,

ತಾಲ್ಲೂಕಿನಲ್ಲಿ ಸುಮಾರು 125 ಹೆಕ್ಟೇರ್ ಭೂಮಿಯಲ್ಲಿ ಭತ್ತದ ನೇಜಿ ನಾಟಿ ಕಾರ್ಯ ನಡೆದಿದೆ. ವರುಣನ ಅವಕೃಪೆಯಿಂದ ಈ ಬಾರಿ ಭತ್ತದ ಕೃಷಿಕರಿಗೆ ಆತಂಕ ಉಂಟಾಗಿತ್ತು. ಹಾಗಾಗಿ ಸುಮಾರು 270ಕ್ಕೂ ಹೆಚ್ಚು ಹೆಕ್ಟೇರ್ ಸ್ಥಳದಲ್ಲಿ ಭತ್ತ ಬೆಳೆಯನ್ನು ಬೆಳೆಯುವ ಗುರಿ ಇದ್ದರೂ ಈತನಕ ಗುರಿ ತಲುಪಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಹಡೀಲು ಬಿದ್ದ ಗದ್ದೆಗಳನ್ನು ನೇಜಿ ನಾಟಿ ಮಾಡುವ ಮೂಲಕ ಈ ಕೃಷಿ ಸಖಿಯರು ರೈತವರ್ಗಕ್ಕೊಂದು ಆಶಾದಾಯಕ ನೆಲೆಯಲ್ಲಿ ಮಾದರಿ ಕಾರ್ಯಕ್ಕೆ ಮುಂದಾಗಿದ್ದಾರೆ.

### ಹಡೀಲು ಗದ್ದೆಗಳು

**ಕೊರೊನಾ ಸಂದರ್ಭದಲ್ಲಿಯೂ ಇಂತಹ ಹಡೀಲು ಗದ್ದೆಗಳು ಮತ್ತೆ ನೇಜಿನಾಟಿಯ ಸಂಭ್ರಮವನ್ನು ಅನುಭವಿಸಿದ್ದವು. ಆದರೆ ಬಳಿಕ ಎಲ್ಲವೂ ಮರೆಯಾಗಿತ್ತು. ಸರ್ಕಾರದ ಈ ಯೋಜನೆಯೂ ಬದಿಗೆ ಸರಿದಿತ್ತು. ಒಮ್ಮೆ ನೇಜಿನಾಟಿಯಿಂದ ನಳನಳಿಸಿದ್ದ ಗದ್ದೆಗಳು ಮತ್ತೆ ಯಥಾ ಪ್ರಕಾರ ಹಡೀಲು ಗದ್ದೆಗಳಾಗಿ ಉಳಿದುಕೊಂಡವು.**

ಡೇ ಎನ್‌ಆರ್‌ಎಲ್‌ಎಂ ಬ್ಲಾಕ್ ಮ್ಯಾನೇಜರ್ ಮೋಹನ್, ತಾಲ್ಲೂಕು ಸಂಪನ್ಮೂಲ ವ್ಯಕ್ತಿ ಪಂ.ರಾ. ಸಂಸ್ಥೆಯ ಧನ್ಯಶ್ರೀ, ಬಿಆರ್‌ಪಿಇಪಿ ರಮ್ಯಾ ಯು.ಜಿ, ಕೃಷಿ ಇಲಾಖೆ ಅಧಿಕಾರಿ ಸ್ಮಿತಾ, ಪ್ರಗತಿಪರ ಕೃಷಿಕರಾದ ಮಹೇಶ್, ನಾರಾಯಣ ಪೂಜಾರಿಮನೆ, ಗದ್ದೆಯ ಮುಖ್ಯಸ್ಥರಾದ ನಾರಾಯಣ ಮಣಿಯಾಣಿ ಹಾಗೂ ಕೊರಗಪ್ಪ ಮಣಿಯಾಣಿ, ಬಳ್ಪ ಗ್ರಾಮ ಪಂಚಾಯತ್ ಮಟ್ಟ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಸಾವಿತ್ರಿ, ಮುಖ್ಯ ಪುಸ್ತಕ ಬರಹಗಾರರು ಸುಬ್ರಹ್ಮಣ್ಯ ಮತ್ತಿತರರು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಹಡೀಲುಗದ್ದೆ ನಾಟಿಗೆ ಪೂರಕ ಬೆಂಬಲ ನೀಡಿದ್ದ ಪ್ರಗತಿಪರ ಕೃಷಿಕ ಮಹೇಶ್ ಅವರ ನೇತೃತ್ವದಲ್ಲಿ ಈ ಹಡೀಲು ಗದ್ದೆ ನೇಜಿನಾಟಿ ನಡೆಯಿತು.

# ಶಿರಾಡಿ ಘಾಟ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಡ್ಡ ಕುಸಿತ; ವಾಹನ ಸವಾರರಿಗೆ ಎಚ್ಚರಿಕೆ

• **ಉದಯವಾಹಿನಿ ಹಾಸನ:**

ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರೆದಿದೆ. ಸಕಲೇಶಪುರ ತಾಲೂಕಿನ ಶಿರಾಡಿ ಘಾಟ್ ಬಳಿ ರಾಷ್ಟ್ರೀಯ ಹೆದ್ದಾರಿ 75ರ ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ಗುಡ್ಡ ಕುಸಿತಗೊಂಡಿದ್ದು, ಆತಂಕ ಎದುರಾಗಿದೆ.

ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಆರ್ಭಟಕ್ಕೆ ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಶಿರಾಡಿಘಾಟ್ ವ್ಯಾಪ್ತಿಯ ಕಪ್ಪಳ್ಳಿ ಬಳಿ ಗುಡ್ಡ ಕುಸಿತ ಉಂಟಾಗಿದೆ. ಸಕಲೇಶಪುರದಿಂದ ಮಂಗಳೂರು ಕಡೆ ತೆರಳುವ ಮಾರ್ಗದಲ್ಲಿ ಘಟನೆ ನಡೆದಿದ್ದು, ತಕ್ಷಣ ಜೆಸಿಬಿ ಬಳಸಿ ಸಿಬ್ಬಂದಿ ಮಣ್ಣು ತೆರವುಗೊಳಿಸುವ ಕಾರ್ಯ ಮಾಡಿದ್ದಾರೆ.

ಈ ಬಾರಿ ಗುಡ್ಡ ಕುಸಿದರೂ ಸಂಚಾರಕ್ಕೆ ಸಮಸ್ಯೆ ಆಗದಂತೆ ವ್ಯವಸ್ಥೆ ಮಾಡಲಾಗಿದೆ. ಶಿರಾಡಿಘಾಟ್‌ನಲ್ಲಿ ಗುಡ್ಡ ಕುಸಿತದ ಸಾಧ್ಯತೆ ಇರುವ ಸ್ಥಳಗಳನ್ನು ಜಿಲ್ಲಾಡಳಿತ ಗುರುತಿಸಿದೆ.

ಚತುಷ್ಪಥ ರಸ್ತೆ ನಿರ್ಮಾಣದ ವೇಳೆ ರಸ್ತೆಯ ಎರಡೂ ಬದಿಗಳಲ್ಲಿ ನೂರಾರು ಅಡಿ ಎತ್ತರದ ಗುಡ್ಡಗಳನ್ನು ಕತ್ತರಿಸಿ ರಸ್ತೆ ನಿರ್ಮಿಸಲಾಗಿತ್ತು. ಇದೀಗ ನಿರಂತರವಾಗಿ ಸುರಿಯುತ್ತಿರುವ


ಉದಯವಾಹಿನಿ ಚಿತ್ರ

ಮಳೆಯಿಂದ ಮಣ್ಣು ಸಡಿಲಗೊಂಡು ಗುಡ್ಡದ ಭಾಗಗಳು ರಸ್ತೆಯ ಕಡೆಗೆ ಜಾರುತ್ತಿವೆ. ಮಣ್ಣು ಹಾಗೂ ಗಿಡಗಳು ಸಮೇತ ಗುಡ್ಡದ ಭಾಗ ಹೆದ್ದಾರಿಗೆ ಕುಸಿಯುತ್ತಿದ್ದು, ರಸ್ತೆಯ ಒಂದು ಬದಿಯಲ್ಲಿ ಮಣ್ಣು ಸಂಗ್ರಹವಾಗಿದೆ. ಇನ್ನೂ ಮಳೆ ಇದೇ ರೀತಿ ಮುಂದುವರಿದರೆ ದೊಡ್ಡ ಪ್ರಮಾಣದಲ್ಲಿ ಗುಡ್ಡ ಕುಸಿಯುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತವಾಗಿದೆ.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಸಂಚರಿಸುವ ವಾಹನ ಸವಾರರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳದ ಪರಿಸ್ಥಿತಿಯನ್ನು ಗಮನಿಸುತ್ತಿದ್ದಾರೆ. ಅಲ್ಲದೆ ಸದ್ಯ ಸಣ್ಣ ಪ್ರಮಾಣದಲ್ಲಿ ಮಣ್ಣು ಕುಸಿದಿದ್ದು, ಸಿಬ್ಬಂದಿ ತಕ್ಷಣ ತೆರವುಗೊಳಿಸುತ್ತಿದ್ದಾರೆ.

**ಕಳಪೆ ಕಾಮಗಾರಿ, ಗುತ್ತಿಗೆದಾರರ ನಿರ್ಲಕ್ಷ್ಯ ಆರೋಪ:**

ರಸ್ತೆ ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರರು ಕಳಪೆ ಕಾಮಗಾರಿ ಮೂಲಕ ರಸ್ತೆ ನಿರ್ಮಾಣ ಮಾಡುತ್ತಿರುವುದು ಒಂದು ಕಡೆಯಾದರೆ, ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿ ರಸ್ತೆ ನಿರ್ಮಾಣ ಮಾಡುತ್ತಿರುವುದು ಈ ರೀತಿಯ ಗುಡ್ಡ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ಬೇಸಿಗೆ ಕಾಲದಲ್ಲಿ, ರಸ್ತೆ ಕಾಮಗಾರಿಯನ್ನು ಶೀಘ್ರವಾಗಿ ಮಾಡದೆ ಮಳೆಗಾಲದಲ್ಲಿ ಅದಕ್ಕೆ ವೇಗ ನೀಡುವುದೇ ಇದಕ್ಕೆ ಕಾರಣವಾಗಿದೆ. ಸಕಲೇಶಪುರ ಭಾಗದಲ್ಲಿ ಗುಡ್ಡ ಕುಸಿತವು ಇದೇ ಮೊದಲೇನಲ್ಲ. ಕಳೆದ ಮೂರು, ನಾಲ್ಕು ವರ್ಷಗಳಿಂದ ಗುಡ್ಡ ಕುಸಿಯುತ್ತಲೇ ಇದೆ. ಆದರೆ ಅಧಿಕಾರಿ ವರ್ಗದವರಾಗಲಿ, ಗುತ್ತಿಗೆದಾರರಾಗಲಿ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಆದರೆ ಇದರಿಂದ ತೊಂದರೆ ಅನುಭವಿಸುತ್ತಿರುವುದು ಸಾರ್ವಜನಿಕರು ಮತ್ತು ಪ್ರಯಾಣಿಕ ವರ್ಗದವರು ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

# ತೂಗುಸೇತುವೆಗಳ ಸರದಾರ ಗಿರೀಶ್ ಭಾರದ್ವಾಜ್‌ಗೆ ಅಂತಿಮ ವಿದಾಯ

• **ಉದಯವಾಹಿನಿ ಸುಳ್ಯ**


ಉದಯವಾಹಿನಿ ಚಿತ್ರ

ದೇಶಾದ್ಯಂತ ''ತೂಗುಸೇತುವೆಗಳ ಸರದಾರ'' ಎಂದೇ ಪ್ರಸಿದ್ಧಿ ಪಡೆದಿದ್ದ ಪದ್ಮಶ್ರೀ ಪುರಸ್ಕೃತ ಸುಳ್ಯದ ಡಾ. ಗಿರೀಶ್ ಭಾರದ್ವಾಜ್ ಅವರಿಗೆ ಮಂಗಳವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಕುಟುಂಬಸ್ಥರು, ಬಂಧು ಬಳಗ, ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಸಾವಿರಾರು ಅಭಿಮಾನಿಗಳು ಭಾರವಾದ ಹೃದಯದಿಂದ ಅಂತಿಮ ನಮನ ಸಲ್ಲಿಸಿದರು. ಜಿಲ್ಲಾಡಳಿತದ ವತಿಯಿಂದ ಸರ್ಕಾರಿ ಗೌರವ ಸಲ್ಲಿಸಿ, ಪಾರ್ಥಿವ ಶರೀರಕ್ಕೆ ಪುಷ್ಪನಮನ ಅರ್ಪಿಸಲಾಯಿತು. ಗೌರವ ವಂದನೆಯೊಂದಿಗೆ ಅಂತ್ಯಕ್ರಿಯೆಯ ವಿಧಿವಿಧಾನಗಳು ನೆರವೇರಿದವು. ತಮ್ಮ ವಿನೂತನ ತಾಂತ್ರಿಕ ಸಾಧನೆಗಳ ಮೂಲಕ ದೇಶಾದ್ಯಂತ ಹೆಸರಾಗಿದ್ದ ಡಾ. ಭಾರದ್ವಾಜ್ ಅವರ ಅಗಲಿಕೆ ಸಾರ್ವಜನಿಕರಲ್ಲಿ ತೀವ್ರ ಶೋಕವನ್ನುಂಟು ಮಾಡಿದೆ. ಅಂತ್ಯಕ್ರಿಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್. ವಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಆರ್. ಅರುಣ್ ಕುಮಾರ್, ಸುಳ್ಯ ತಹಶೀಲ್ದಾರ್ ಮಂಜುಳಾ, ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಸಾಮಾಜಿಕ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದು, ಗೌರವ ನಮನ ಸಲ್ಲಿಸಿದರು.

# ಇನ್ಮುಂದೆ ಮಹಾರಾಷ್ಟ್ರದಲ್ಲಿ ಕರ್ನಾಟಕದ ಅಡಿಕೆ ವಾಹನಗಳಿಗಿಲ್ಲ ತಡೆ!

• **ಉದಯವಾಹಿನಿ ಹುಬ್ಬಳ್ಳಿ:**

ಮಹಾರಾಷ್ಟ್ರದಲ್ಲಿ ತಡೆಹಿಡಿದಿದ್ದ ಅಡಿಕೆ ಸರಕುಗಳುಳ್ಳ ವಾಹನಗಳ ಬಿಡುಗಡೆಗಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಅವರು ಅಲ್ಲಿನ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಜೊತೆ ಯಶಸ್ವಿ ಮಾತುಕತೆ ನಡೆಸಿ, ಬಿಡುಗಡೆಗೆ ಮನವೊಲಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಹಾರಾಷ್ಟ್ರ ಸಿಎಂ ಫಡ್ನವೀಸ್, ತಮ್ಮ ರಾಜ್ಯದಲ್ಲಿ ತಡೆಹಿಡಿದಿರುವ ಕರ್ನಾಟಕದ ಅಡಿಕೆ ಸರಕನ್ನು ತಕ್ಷಣವೇ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

ಅಲ್ಲದೇ, ಮುಂದಿನ ದಿನಗಳಲ್ಲೂ ಅಡಿಕೆ ಸಾಗಣೆಗೆ ಯಾವುದೇ ಅಡ್ಡಿಯಾಗದಂತೆ ಅಗತ್ಯ ಕ್ರಮ ಕೈಗೊಂಡು ಸೂಕ್ತ ವ್ಯವಸ್ಥೆ ಕಲ್ಪಿಸುವುದಾಗಿ ಸಹ ಹೇಳಿದ್ದಾರೆ. ಈ ಮೂಲಕ ಜೋಶಿ ಅವರು ಕರ್ನಾಟಕದ ರೈತರ ಮತ್ತು ಅಡಿಕೆ ವರ್ತಕರ ಹಾಗೂ ಪ್ರಮುಖ ಅಡಿಕೆ ಸಹಕಾರಿ ಸಂಸ್ಥೆಗಳ ಸಮಸ್ಯೆಯನ್ನು ಪರಿಹರಿಸಿದ್ದಾರೆ.

ಅಡಿಕೆಯು ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಗಳಲ್ಲೊಂದಾಗಿದೆ ರಾಜ್ಯದಿಂದ ಉತ್ತರ ಭಾರತದ ಮಾರುಕಟ್ಟೆಗಳಿಗೆ ಅಡಿಕೆ ರವಾನೆ ಆಗುತ್ತಿತ್ತು. ಆದರೆ, ಇತ್ತೀಚೆಗೆ ಮಹಾರಾಷ್ಟ್ರದ ಎಲ್ಲೆಡೆ ಕರ್ನಾಟಕದ ಅಡಿಕೆ ಸಾಗಣೆ ವಾಹನಗಳನ್ನು ತಪಾಸಣೆಗೆಂದು ದಿನಗಟ್ಟಲೇ ತಡೆಹಿಡಿಯಲಾಗುತ್ತಿತ್ತು. ಹೀಗಾಗಿ ಕರ್ನಾಟಕದ ರೈತರು ಮತ್ತು ವರ್ತಕರು, ಅಡಿಕೆ ಸಹಕಾರಿ ಸಂಸ್ಥೆಗಳಿಗೆ ತೀವ್ರ ಸಮಸ್ಯೆಯಾಗಿತ್ತು.


ಉದಯವಾಹಿನಿ ಚಿತ್ರ

> ಹೀಗಾಗಿ ಕೇಂದ್ರ ಸಚಿವ ಜೋಶಿ ಅವರು ಮಂಗಳವಾರ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಅವರನ್ನು ದೆಹಲಿಯಲ್ಲೇ ಭೇಟಿ ಮಾಡಿ, ಚರ್ಚಿಸಿದ್ದಲ್ಲದೆ, ಕರ್ನಾಟಕದ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ರಾಜ್ಯದ ಅಡಿಕೆ ಸರಕುಳ್ಳ ವಾಹನಗಳನ್ನು ತಡೆಯದಂತೆ ಯಶಸ್ವಿ ಮಾತುಕತೆ ನಡೆಸಿದರು. ಮಹಾರಾಷ್ಟ್ರ ಸಿಎಂ ಸಮ್ಮತಿಸಿದ್ದರಿಂದ ಅವರಿಗೆ ರಾಜ್ಯದ ರೈತರ ಪರವಾಗಿ ಸಚಿವ ಪ್ರಲ್ಹಾದ ಜೋಶಿ ಧನ್ಯವಾದ ಅರ್ಪಿಸಿದ್ದಾರೆ.

ಅಲ್ಲದೇ, ಅಡಿಕೆ ಹಾನಿಗೊಳಗಾಗಿ ಬೆಳೆಗಾರರಿಗೆ ತೀವ್ರ ಆರ್ಥಿಕ ನಷ್ಟವೂ ಎದುರಾಗಿತ್ತು.

# ಕೋವಿ ಪರವಾನಿಗೆ ಗೃಹಸಚಿವರಿಗೆ 'ರೈ' ಮನವಿ

• **ಉದಯವಾಹಿನಿ ಪುತ್ತೂರು:**

ಕೃಷಿ ರಕ್ಷಣೆ ಮತ್ತು ಆತ್ಮರಕ್ಷಣೆಯ ಹಿನ್ನಲೆಯಲ್ಲಿ ಕೋವಿ, ರಿವಾಲ್ವರ್ ಮುಂತಾದ ಆಯುಧಗಳ ನವೀಕರಣ ಅರ್ಜಿಗಳಿಗೆ ಪರವಾನಿಗೆ ನೀಡುವ ಕುರಿತು ಶೀಘ್ರ ಕ್ರಮಕೈಗೊಳ್ಳುವಂತೆ ರಾಜ್ಯದ ಗೃಹಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಪುತ್ತೂರು ಶಾಸಕ ಅಶೋಕ್ ರೈ ಅವರು ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಗೃಹಸಚಿವರನ್ನು ಭೇಟಿ ಮಾಡಿದ ಶಾಸಕರು ರೈತರು ಹಲವಾರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕೋವಿ, ರಿವಾಲ್ವರ್ ಇತ್ಯಾದಿ) ಹೊಂದಿದ್ದಾರೆ. ಇದು ಕಾಲ ಕಾಲಕ್ಕೆ ಕ್ರಿಮಿನಲ್ ಕೇಸ್ ರಹಿತರಿಗೆ ಸುಗಮವಾಗಿ ನವೀಕರಣಗೊಳ್ಳುತ್ತಿತ್ತು. ಪರವಾನಿಗೆದಾರರಿಗೆ ವಯಸ್ಸಾದಾಗ ಅಥವಾ ಮೃತ ಪಟ್ಟಲ್ಲಿ ಅವರ ವಾರೀಸುದಾರ ಅರ್ಜಿ ಸಲ್ಲಿಸಿದಲ್ಲಿ ವರ್ಗಾವಣೆಯಾಗುತ್ತಿತ್ತು. ಇನ್ನು ಕೆಲವರು ಹೊಸ ಪರವಾನಿಗೆಗೆ ಅರ್ಜಿ ಸಲ್ಲಿಸಿ ಮಂಜೂರಾಗಿ ಆಯುಧಗಳನ್ನು ಹೊಂದುತ್ತಿದ್ದರು. ಇಂತಹ ಸುಗಮವಾದ ವ್ಯವಸ್ಥೆ 2025ರ ಮೇ ತಿಂಗಳುಗಳವರೆಗೆ ರೂಢಿಯಿಂದ ನಡೆದು ಬರುತ್ತಿತ್ತು. ಜೂನ್ 2025 ರಿಂದ ಈ ಕುರಿತು ಯಾವುದೇ ಕಾನೂನು ಮತ್ತು ನಿಯಮ ಬದಲಾಗದಿದ್ದರೂ ಲೈಸನ್ಸಿಂಗ್ ವ್ಯವಸ್ಥೆ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಿ ಪರವಾನಿಗೆದಾರರಿಗೆ ತೊಂದರೆ ನೀಡುತ್ತಿದೆ. ಆದ್ದರಿಂದ ಸದರಿ ನವೀಕರಣದ ಬಗ್ಗೆ ಪರವಾನಿಗೆ ನೀಡುವ ಕುರಿತು ಇಲಾಖೆಗೆ ಆದೇಶಿಸುವಂತೆ ಸಚಿವರಿಗೆ ಶಾಸಕರು ಮನವಿ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

> ದ ಕ ಜಿಲ್ಲೆಯಲ್ಲಿ ಈಗಾಗಲೇ ಕೋವಿ ಪರವಾನಿಗೆ ಪಡೆದಿರುವ ರೈತರ ಕೋವಿ ಪರವಾನಿಗೆಯನ್ನು ನವೀಕರಣ ಮಾಡುವಲ್ಲಿರುವ ಲೋಪಗಳನ್ನು ಸರಿಪಡಿಸಿ ಕ್ರಮಕೈಗೊಳ್ಳುವಂತೆ ಸಚಿವರಲ್ಲಿ ಆಗ್ರಹಿಸಿದ್ದೇನೆ. ಶೀಘ್ರ ಕ್ರಮದ ಭರವಸೆಯೂ ಇದೆ.
> ಅಶೋಕ್ ರೈ ಶಾಸಕರು ಪುತ್ತೂರು.

ಕೋವಿ ಪರವಾನಿಗೆ ನವೀಕರಣ ವಿಚಾರದಲ್ಲಿ ಈ ಹಿಂದೆ ಗೃಹ ಸಚಿವರಾಗಿದ್ದ ಡಾ. ಜಿ ಪರಮೇಶ್ವರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿ ಮನವಿ ಮಾಡಿದ್ದೆ, ಇದೇ ವಿಚಾರವನ್ನು ಸದನದ ಅಧಿವೇಶನದಲ್ಲಿಯೂ ಸರ್ಕಾರದ ಗಮನ ಸೆಳೆದಿದ್ದೆ.

# ಚಿಕ್ಕಮಗಳೂರಲ್ಲಿ ಮಳೆ ಅಬ್ಬರಕ್ಕೆ ಧರೆಗುರುಳುತ್ತಿವೆ ಮರಗಳು!

## ಕಪ್ಪೆ ಶಂಕರ ದೇಗುಲ ಮುಳುಗುವ ಹಂತಕ್ಕೆ ತಲುಪಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನ-ಜೀವನ ಅಸ್ತವ್ಯಸ್ತವಾಗಿದೆ.

• **ಉದಯವಾಹಿನಿ ಚಿಕ್ಕಮಗಳೂರು:**

ಮಲೆನಾಡು ಭಾಗದಲ್ಲಿ ಪುನರ್ವಸು ಮಳೆಯ ಅಬ್ಬರ ಮುಂದುವರೆದಿದ್ದು, ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಜಿಲ್ಲೆಯ ಪ್ರಮುಖ ನದಿಗಳು ಹಾಗೂ ಜಲಪಾತಗಳು ಮೈದುಂಬಿ ಹರಿಯುತ್ತಿವೆ. ಮೂಡಿಗೆರೆ ಮತ್ತು ಶೃಂಗೇರಿ ತಾಲ್ಲೂಕಿನ ಹಲವೆಡೆ ಮಳೆಯ ತೀವ್ರತೆ ಹೆಚ್ಚಾಗಿದ್ದು, ನದಿ ತೀರದ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ.

**1 : ಮೈದುಂಬಿ ಹರಿಯುತ್ತಿರುವ ಜಲಪಾತ**

**2 : ಅಪಾಯಮಟ್ಟ ಮೀರಿ ಹರಿಯುತ್ತಿವೆ ನದಿ**

**3 : ಮೂರು ದಿನಗಳಿಂದ ನಿರಂತರ ಮಳೆ**

ಮುಂಜಾಗ್ರತಾ ಕ್ರಮವಾಗಿ ಜಿಲ್ಲಾಡಳಿತ ಮೂಡಿಗೆರೆ, ಕೊಪ್ಪ, ಎನ್.ಆರ್.ಪುರ, ಶೃಂಗೇರಿ ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಆರು ಹೋಬಳಿಗಳ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ರಜೆ ಘೋಷಿಸಿ ಆದೇಶ ಹೊರಡಿಸಿದೆ. ಇನ್ನೊಂದೆಡೆ ಶೃಂಗೇರಿ ತಾಲ್ಲೂಕಿನ ಮೂಲಕ ಹರಿಯುವ ತುಂಗಾ ನದಿಯೂ ಅಪಾಯದ ಮಟ್ಟದತ್ತ ಸಾಗುತ್ತಿದೆ.

ನಿರಂತರ ಮಳೆಯಿಂದ ನದಿ ತುಂಬಿ ಹರಿಯುತ್ತಿದ್ದು, ನದಿ ತೀರದ ಪ್ರದೇಶಗಳಲ್ಲಿ ನೆರೆ ಭೀತಿ ಎದುರಾಗಿದೆ. ಮಳೆ ಇದೇ ರೀತಿ ಮುಂದುವರೆದರೆ ನದಿ ತಟದಲ್ಲಿರುವ ಐತಿಹಾಸಿಕ ಕಪ್ಪೆ



ಉದಯವಾಹಿನಿ ಚಿತ್ರ

> ಕಾಮಗಾರಿ ಸ್ಥಳದಲ್ಲಿ ಬ್ಯಾರಿಕೇಡ್‌ಗಳು, ಎಚ್ಚರಿಕೆ ಫಲಕಗಳು ಹಾಗೂ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸದಿರುವುದರಿಂದ ವಾಹನ ಸವಾರರು, ಪಾದಚಾರಿಗಳು ಮತ್ತು ಜಾನುವಾರುಗಳು ಗುಂಡಿಗೆ ಬಿದ್ದು ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

> ಭಾರೀ ಮಳೆಯ ನಡುವೆಯೇ ತರಾತುರಿಯಲ್ಲಿ ನಡೆಯುತ್ತಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಕಾಮಗಾರಿಗಾಗಿ ಮುಖ್ಯ ರಸ್ತೆಯ ಪಕ್ಕದಲ್ಲೇ ಸುಮಾರು 20 ಅಡಿ ಆಳದ ಗುಂಡಿಗಳನ್ನು ತೋಡಲಾಗಿದ್ದರೂ, ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಶಂಕರ ದೇವಾಲಯ ಭಾಗಶಃ ನೀರಿನಲ್ಲಿ ಮುಳುಗುವ ಸಾಧ್ಯತೆ ಇದೆ. ಮುಂಜಾಗ್ರತಾ ಕ್ರಮವಾಗಿ ನದಿ ತೀರದ ನಿವಾಸಿಗಳು ಎಚ್ಚರಿಕೆಯಿಂದ ಇರಬೇಕೆಂದು ಸ್ಥಳೀಯ ಆಡಳಿತ ಸೂಚಿಸಿದೆ. ಮಳೆಯ ಆರ್ಭಟದಿಂದ ಶೃಂಗೇರಿ ತಾಲ್ಲೂಕಿನ ಪ್ರಸಿದ್ಧ ಸಿರಿಮನೆ ಜಲಪಾತವೂ ಜೀವಕಳೆ ಪಡೆದುಕೊಂಡಿದೆ. ಹಾಲಿನ ನೊರೆಯಂತೆ ಧುಮ್ಮಿಕ್ಕಿ ಹರಿಯುತ್ತಿರುವ ಜಲಪಾತದ ಮನಮೋಹಕ ದೃಶ್ಯ ಪ್ರವಾಸಿಗರನ್ನು ಸೆಳೆಯುತ್ತಿದೆ. ಮಳೆಯ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಹಸಿರು ಪ್ರಕೃತಿ ಮತ್ತಷ್ಟು ಕಂಗೊಳಿಸುತ್ತಿದ್ದು, ಸಿರಿಮನೆ ಫಾಲ್ಸ್ ಇದೀಗ ಪ್ರಕೃತಿ ಪ್ರಿಯರ ಪ್ರಮುಖ ಆಕರ್ಷಣೆಯಾಗಿದೆ ಮೂಡಿಗೆರೆ, ಕಳಸ, ಕೊಪ್ಪ ಸೇರಿದಂತೆ ಘಟ್ಟಪ್ರದೇಶಗಳಲ್ಲಿ ನಿರಂತರ ಮಳೆಯೊಂದಿಗೆ ಬಿರುಗಾಳಿ ಬೀಸುತ್ತಿದ್ದು, ಹಲವು ಕಡೆ ಮರಗಳು ಧರೆಗುರುಳಿದ ಪರಿಣಾಮ ಮನೆಗಳಿಗೆ ಹಾನಿಯಾಗಿದ್ದು, ಸಾರ್ವಜನಿಕರು ಆತಂಕದಲ್ಲಿ ದಿನ ಕಳೆಯುವಂತಾಗಿದೆ.

ಭಾರೀ ಗಾಳಿ-ಮಳೆಗೆ ಬಾಳೂರು-ಹೊರಟ್ಟಿ ಗ್ರಾಮದಲ್ಲಿ ಅನಿತಾ ಡಯಾಸ್ ಅವರ ಮನೆ ಮೇಲೆ ಮರ ಬಿದ್ದು ಮನೆಗೆ ಹಾನಿಯಾಗಿದೆ. ದೇವನಗೂಲ್ ಗ್ರಾಮದಲ್ಲಿ ಪ್ರತಾಪ್ ಅವರ ಮನೆಯ ಮೇಲೂ ಮರ ಬಿದ್ದಿದ್ದು, ಮನೆಯ ಸಮೀಪದ ಗುಡ್ಡ ಜರಿಯುತ್ತಿರುವುದರಿಂದ ಸ್ಥಳೀಯರು ಭಯಭೀತರಾಗಿದ್ದಾರೆ. ನಿರಂತರ ಮಳೆಯಿಂದ ಘಟ್ಟ ಪ್ರದೇಶಗಳ ಕೆಳಭಾಗದಲ್ಲಿ ವಾಸಿಸುವ ಜನರಲ್ಲಿ ಗುಡ್ಡ ಕುಸಿಯುವ ಆತಂಕ ಹೆಚ್ಚಾಗಿದೆ. ಇದೇ ವೇಳೆ, ಕೊಪ್ಪ ತಾಲ್ಲೂಕಿನ ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಬ್ಬಿಬೈಲ್ ಗ್ರಾಮದಲ್ಲಿ ವಾದಿರಾಜ್ ಅವರ ಮನೆಯ ಮೇಲೆ ಸಾಗುವಾನಿ ಹಾಗೂ ಅಡಿಕೆ ಮರಗಳು ಉರುಳಿ ಬಿದ್ದಿವೆ. ಪರಿಣಾಮ ಮನೆಯ ಮುಂಭಾಗದ ಪೋರ್ಟಿಕೊ, ಕಾಂಪೌಂಡ್ ಹಾಗೂ ಪಕ್ಕದಲ್ಲಿದ್ದ ಕೊಟ್ಟಿಗೆಗೆ ಹಾನಿಯಾಗಿದೆ. ಘಟನೆ ಬಳಿಕ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇನ್ನೊಂದೆಡೆ, ಕಳಸ ತಾಲ್ಲೂಕಿನ ಎಸ್.ಕೆ.ಮೇಗಲ್ ಗ್ರಾಮದಲ್ಲಿ ಬೃಹತ್ ಮರ ಧರೆಗುರುಳಿದ್ದು, ಗ್ರಾಮಸ್ಥರೇ ಸ್ವಯಂಪ್ರೇರಿತರಾಗಿ ಮರ ತೆರವುಗೊಳಿಸಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿದರು. ಕಳಸ ಭಾಗದಲ್ಲಿಯೂ ಕಳೆದ ಮೂರು ದಿನಗಳಿಂದ ನಿರಂತರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

### ಸಾರ್ವಜನಿಕರಿಗೆ ಎಚ್ಚರಿಕೆ

**ಹವಾಮಾನ ಇಲಾಖೆ ಇನ್ನೂ ಕೆಲವು ದಿನಗಳ ಕಾಲ ಮಲೆನಾಡು ಭಾಗದಲ್ಲಿ ಭಾರೀ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದ್ದು, ತಗ್ಗು ಪ್ರದೇಶ ಹಾಗೂ ಗುಡ್ಡದ ತಪ್ಪಲಿನಲ್ಲಿ ವಾಸಿಸುವ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.**

# ಸಾರ್ವಜನಿಕರ ದೂರು, ಅಧಿಕಾರಿಗಳ ಸಭೆ

• **ಉದಯವಾಹಿನಿ ಹಾನಗಲ್.:**

ಜನ ಸಮಸ್ಯೆ ಹೇಳಿಕೊಂಡು ನನ್ನ ಬಳಿ ಬಂದರೆ ಅದು ಸ್ಥಳೀಯ ಹಂತದ ಅಧಿಕಾರಿಗಳ ವೈಫಲ್ಯ ಎಂದು ಭಾವಿಸಬೇಕಾಗುತ್ತದೆ. ಸಾರ್ವಜನಿಕರ ದೂರು, ದುಮ್ಮಾನಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು. ಸಮಸ್ಯೆಗೆ ಪರಿಹಾರ ದೊರಕಿಸುವುದು ಕಷ್ಟವಾದರೆ ಸೂಕ್ತ ಹಿಂಬರಹ ನೀಡಬೇಕು. ಪದೇಪದೇ ಅಲೆದಾಡಿಸಬೇಡಿ. ಸಾರ್ವಜನಿಕರ ದೂರುಗಳಿಗೆ ಸಂಬಂಧಿಸಿದಂತೆ ಪ್ರತಿ ತಿಂಗಳು ಕೈಗೊಂಡ ಕ್ರಮಗಳ ವಿವರಣೆಯೊಂದಿಗೆ ತಾಪಂ ಇಒ ಅವರಿಗೆ ವರದಿ ಸಲ್ಲಿಸಿ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು. ಇಲ್ಲಿನ ತಾಪಂ ಸಭಾಂಗಣದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಇನ್ನು ಮುಂದೆ ನೀವು ನೀಡುವ ವರದಿ ಬಗ್ಗೆ ತಿಳಿದುಕೊಳ್ಳಲು ತಾಪಂ ಇಒ ಅವರೊಂದಿಗೆ ಸಭೆ ನಡೆಸಲಾಗುವುದು. ಸಾರ್ವಜನಿಕರು ಸಮಸ್ಯೆ ಹೇಳಿಕೊಂಡು ನನ್ನ ಬಳಿ ಬಂದಾಗ ಸೂಕ್ತ ಉತ್ತರ ನೀಡಲು ನನಗೂ ಸಹ ಅನುಕೂಲವಾಗಲಿದೆ. ಅಲ್ಲದೇ ನಿಮ್ಮ ಮೇಲಿನ ಒತ್ತಡ ಸಹ ಕಡಿಮೆಯಾಗಿ ಉತ್ತಮ ಆಡಳಿತ ನೀಡಲು ಅನುಕೂಲವಾಗಲಿದೆ. ಅಲ್ಲದೇ ಸಾರ್ವಜನಿಕರ ಅನಗತ್ಯ ಓಡಾಟಕ್ಕೂ ಬ್ರೇಕ್ ಬೀಳಲಿದೆ ಎಂದರು.

# ವಿಮೆ ಪರಿಹಾರ ಬಿಡುಗಡೆಗೆ ಮನವಿ

• **ಉದಯವಾಹಿನಿ ನವಲಗುಂದ,:**

ಮಳೆಯಿಲ್ಲದೆ ರೈತರು ಸಂಕಷ್ಟದಲ್ಲಿದ್ದು ನವಲಗುಂದ ವಿಧಾನಸಭಾ ಕ್ಷೇತ್ರವನ್ನು ಬರಗಾಲವೆಂದು ಘೋಷಣೆ ಮಾಡಬೇಕು ಹಾಗೂ ರೈತರಿಗೆ 2025 2026 ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ವಿಮೆ ಪರಿಹಾರ ಬೇಗನೆ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಬಿಜೆಪಿ ನವಲಗುಂದ ಮಂಡಳದಿಂದ ತಹಶೀಲ್ದಾರ ಸುಧೀರ ಸಾಹುಕಾರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಬಾರಿ ಬೆಳೆ ವಿಮೆಯನ್ನು ರೈತರು ಬ್ಯಾಂಕಿನಲ್ಲಿ ತುಂಬಬೇಕು ಅಥವಾ ಆನ್ಲೈನ್ ಸೆಂಟರ್ ನಲ್ಲಿ ತುಂಬಬೇಕು ಎಂಬ ಗೊಂದಲವನ್ನು ತಕ್ಷಣವೇ ನಿವಾರಣೆ ಮಾಡಿಬೇಕು ಎಸ್ ಐ ಆರ್ ಪ್ರಕ್ರಿಯೆ ಸರಿಯಾದ ಹಾಗೂ ಪಾರದರ್ಶಕತೆಯಿಂದ ನಡೆಯತ್ತಿಲ್ಲಾ ಸರಿಯಾದ ರೀತಿಯಲ್ಲಿ ಪ್ರಕ್ರಿಯೆ ನಡೆಸಲು ಕ್ರಮ ವಹಿಸಿ ಯಾವುದೇ ಲೋಪ ದೋಷಗಳ ಆಗದಹಾಗ ಸರಿಯಾದ ರೀತಿಯಲ್ಲಿ ನಡೆಸಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ, ಮಂಡಳ ಅಧ್ಯಕ್ಷ ಗಂಗಪ್ಪ ಮನಮಿ, ದೇವರಾಜ ದಾಡಿಭಾವಿ, ಷಣ್ಮುಖ ಗುರಿಕಾರ, ಅಂದಾನಯ್ಯ ಹಿರೇಮಠ, ಮಲ್ಲಿಕಾರ್ಜುನ ಸಂಗನಗೌಡ್ರ, ಸಿದ್ದನಗೌಡ ಪಾಟೀಲ, ನಾಗಪ್ಪ ಹರ್ಥಿ, ಸಿದ್ದಣ್ಣ ಕಿಟಗೇರಿ ಸೇರಿ ನೂರಾರು ಪದಾಧಿಕಾರಿಗಳು ಇದ್ದರು.

# 12 ವರ್ಷಗಳಿಂದ ತಲೆಮರೆಸಿಕೊಂಡಿದ್ದ ನಕಲಿ ಡಿವೈಎಸ್‌ಪಿ ಬಂಧನ

• **ಉದಯವಾಹಿನಿ ವಿಜಯಪುರ, :**

ಸುಮಾರು 12 ವರ್ಷಗಳಿಂದ ತಲೆಮರೆಸಿಕೊಂಡಿದ್ದ, ತಾನು ಡಿಎಸ್‌ಪಿ ಎಂದು ನಂಬಿಸಿ ನಿರುದ್ಯೋಗಿ ಯುವಕರಿಗೆ ಪೊಲೀಸ್ ಹಾಗೂ ಇತರೆ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಹೇಳಿ ಲಕ್ಷಾಂತರ ರೂಪಾಯಿ ವಂಚನೆ ಮಾಡುತ್ತಿದ್ದ ಆರೋಪಿಯನ್ನು ವಿಜಯಪುರ ಜಿಲ್ಲೆಯ ಎಪಿಎಂಸಿ ಠಾಣೆ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತನನ್ನು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ವರಗೋಡದಿನ್ನಿ ಗ್ರಾಮದ ಗ್ಯಾನನಗೌಡ ಜ್ಞಾನಗೌಡ ಗಣೇಶ ಸಿ. ಸಂಪತ್‌ಕುಮಾರ (31) ಎಂದು ಗುರುತಿಸಲಾಗಿದೆ.

# ಅನಧಿಕೃತ ಕೋಚಿಂಗ್ ಸೆಂಟರ್ಗಳನ್ನು ಬಂದ್ ಮಾಡಲು ಶಿಕ್ಷಣ ಇಲಾಖೆಗೆ ಮನವಿ

• **ಉದಯವಾಹಿನಿ ಬೀದರ್:**

ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅನಧಿಕೃತ ಕೋಚಿಂಗ್ ಸೆಂಟರ್ಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಅವುಗಳನ್ನು ತಕ್ಷಣ ಬಂದ್ ಮಾಡಬೇಕೆಂದು ಆಗ್ರಹಿಸಿ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆ ವತಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸಲ್ಲಿಸಿ ಮಾತನಾಡಿದ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಸಂಸ್ಥಾಪಕ ಅಧ್ಯಕ್ಷ ಸ್ವಾಮಿದಾಸ ಕೆಂಪೆನೋರ್, ಜಿಲ್ಲೆಯ ಹಲವು ಕೋಚಿಂಗ್ ಸೆಂಟರ್ಗಳು ಶಿಕ್ಷಣ ಸಚಿವಾಲಯದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದು, ನಿಗದಿತ ವಯಸ್ಸಿಗಿಂತ ಕಡಿಮೆ ಮಕ್ಕಳನ್ನು ದಾಖಲಿಸಿಕೊಂಡು ಉತ್ತಮ ಅಂಕಗಳ ಭರವಸೆ ನೀಡಿ ಪೋಷಕರನ್ನು ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದರು.

ಮಕ್ಕಳ ಮೇಲೆ ಅನಗತ್ಯ ಶೈಕ್ಷಣಿಕ ಒತ್ತಡ ಹೇರಿ ಅವರ ಬಾಲ್ಯ ಹಾಗೂ ಶಿಕ್ಷಣದ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ. ಈ ಕುರಿತು ಹಲವು ಸಂಘ-ಸಂಸ್ಥೆಗಳು ದೂರು ನೀಡಿದರೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



# ಕೌಟುಂಬಿಕ ಹೊಂದಾಣಿಕೆ ಕೊರತೆ

• **ಉದಯವಾಹಿನಿ ಹುಬ್ಬಳ್ಳಿ:**

ಪತಿಯೊಬ್ಬ ತನ್ನ ಪತ್ನಿಗೆ ಹೆಲ್ಮೆಟ್‌ನಿಂದ ಹೊಡೆದು ಕೊಲೆ ಮಾಡಿರುವ ಘಟನೆ ಹುಬ್ಬಳ್ಳಿ ಸಮೀಪದ ತಾರಿಹಾಳ ಗ್ರಾಮದಲ್ಲಿ ಇಂದು ಬೆಳಗ್ಗೆ ನಡೆದಿದೆ. ನಾಲ್ಕೂವರೆ ತಿಂಗಳ ಹಿಂದೆಯಷ್ಟೆ ಇವರ ಮದುವೆಯಾಗಿತ್ತು. ಮೃತ ಮಹಿಳೆಯನ್ನು ನಾಗರತ್ನ ಹಳೇಮನಿ (19)ಎಂದು ಗುರುತಿಸಲಾಗಿದೆ. ಆರೋಪಿ ಪತಿ ತಾರಿಹಾಳ ಗ್ರಾಮದ ಗಣೇಶನಗರ ನಿವಾಸಿ ಶಿವರಾಜ್ ಹಳೇಮನಿ (28) ಎಂದು ತಿಳಿದುಬಂದಿದೆ. ನಾಲ್ಕೂವರೆ ತಿಂಗಳ ಹಿಂದೆ ಇವರಿಬ್ಬರ ವಿವಾಹ ನಡೆದಿತ್ತು.

ಪೊಲೀಸ್ ಮೂಲಗಳ ಪ್ರಕಾರ, ಮದುವೆಯಾದ ಬಳಿಕ ದಂಪತಿ ನಡುವೆ ಆಗಾಗ್ಗೆ ಕಲಹ ಉಂಟಾಗುತ್ತಿದ್ದು, ನಾಗರತ್ನ ಪದೇ ಪದೆ ತವರು ಮನೆಗೆ ತೆರಳುತ್ತಿದ್ದರಂತೆ. ಬುಧವಾರವಷ್ಟೇ ನಾಗರತ್ನ ತವರು ಮನೆಯಿಂದ ಗಂಡನ ಮನೆಗೆ ಮರಳಿದ್ದರು. ಮುಂಜಾನೆ ಕ್ಷುಲ್ಲಕ ವಿಚಾರಕ್ಕೆ ಪತಿ-ಪತ್ನಿ ನಡುವೆ ಮತ್ತೆ ವಾಗ್ವಾದ ನಡೆದಿದ್ದು, ಆಕ್ರೋಶಗೊಂಡ ಶಿವರಾಜ್, ಹೆಲ್ಮೆಟ್‌ನಿಂದ ಪತ್ನಿಯ ತಲೆಗೆ ಬಲವಾಗಿ ಹೊಡೆದಿದ್ದಾನೆ. ಗಂಭೀರವಾಗಿ ಗಾಯಗೊಂಡ ನಾಗರತ್ನ ಸ್ಥಳದಲ್ಲೇ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿವೈಎಸ್ಪಿ ಹಾಗೂ ಇನ್ಸ್‌ಪೆಕ್ಟರ್ ಮುರಗೇಶ ಚನ್ನಣ್ಣವರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಪರಾರಿಯಾಗಿರುವ ಆರೋಪಿ ಶಿವರಾಜ್ ಬಂಧನಕ್ಕಾಗಿ ಜಾಲ ಬೀಸಿದ್ದಾರೆ.

